
# ಶರಣ ಚೇತನ


ಶ್ರೀ ಮಹಾಲಿಂಗೇಶ್ವರರು


ಶ್ರೀ ಬಸವೇಶ್ವರರು

ಸಂಪುಟ : ೫ ಜೂನ - ೨೦೦೬ ಸಂಚಿಕೆ : ೨

## ಮೊದಲು ಮಾನವನಾಗು !

ಓದಿ ಬ್ರಾಹ್ಮಣನಾಗು
ಕಾದಿ ಕ್ಷತ್ರಿಯನಾಗು
ಶೂದ್ರ ವೈಶ್ಯನೆ ಆಗು
ದುಡಿದು ಗಳಿಸಿ
ಏನಾದರೂ ಆಗು
ನಿನ್ನೊಲವಿನಂತಾಗು
ಏನಾದರೂ ಸರಿಯೇ-
ಮೊದಲು ಮಾನವನಾಗು !

ಹಿಂದು ಮುಸ್ಲಿಮನಾಗು
ಬೌದ್ಧ ಕ್ರೈಸ್ತನೆ ಆಗು
ಚಾರ್ವಾಕನೇ ಆಗು
ಭೋಗ ಬಯಸಿ
ಏನಾದರೂ ಆಗು
ಹಾರೈಸಿದಂತಾಗು
ಏನಾದರೂ ಸರಿಯೆ,
ಮೊದಲು ಮಾನವನಾಗು !

ರಾಜಕಾರಣಿಯಾಗು
ರಾಷ್ಟ್ರಭಕ್ತನೆ ಆಗು
ಕಲೆಗಾರ ವಿಜ್ಞಾನಿ ವ್ಯಾಪಾರಿಯಾಗು
ಏನಾದರೂ ಆಗು
ನೀ ಬಯಸಿದಂತಾಗು
ಏನಾದರೂ ಸರಿಯೇ
ಮೊದಲು ಮಾನವನಾಗು !



ಪುರಾಣಿಕ




# ಶರಣ ಚೇತನ

ಶರಣರ ಬದುಕು, ಸಾಹಿತ್ಯ ಹಾಗೂ ಸಾಂಸ್ಕೃತಿಕ ಪ್ರಸಾರಕ್ಕೆ ಮೀಸಲಾದ ಮಾಸ ಪತ್ರಿಕೆ

ಸಂಪುಟ : ೫ | ಜೂನ - ೨೦೦೬ | ಸಂಚಿಕೆ : ೨


ನೀವು ಉಳಿದ ಸಂಪತ್ತನ್ನು ರಕ್ಷಿಸುವಂತೆ
ಶರಣ ಸಾಹಿತ್ಯವನ್ನು ರಕ್ಷಿಸಿರಿ.
- ಫ. ಗು. ಹಳಕಟ್ಟಿ

## ಚೇತನದೊಳಗೆ....


೦೩. ಚೇತನನಾಡಿ

೦೪. ಸಂಪಾದಕೀಯ

೦೫. ಕಡೆಗೀಲು : - ಡಾ. ವಿ. ಎಸ್. ಮಾಳಿ

೦೬. ಸಿದ್ಧಯ್ಯ ಪುರಾಣಿಕ - ಜಿ. ಎಸ್. ಸಿದ್ಧಲಿಂಗಯ್ಯ

೧೧. ಡಾ. ಸಿದ್ಧಯ್ಯ ಪುರಾಣಿಕರ ಸಾಹಿತ್ಯ ಸೇವೆ - ಡಾ. ಸಿ. ನಾಗಭೂಷಣ

೧೪. ಡಾ. ಸಿದ್ಧಯ್ಯ ಪುರಾಣಿಕರ ಸಾಹಿತ್ಯ ಸೂಚಿ -

೧೬. ವಚನ ವಾಙ್ಮಯ ಪ್ರಸಾರ : ಇನ್ನು ಮುಂದೆ - ಡಾ. ಎಫ್. ಟಿ. ಹಳ್ಳಿಕೇರಿ

೨೦. ಪ್ರಸ್ತುತ - ಬಿ. ಆರ್. ಪೋಲೀಸ್‌ಪಾಟೀಲ

೨೧. ಪೂಜ್ಯಶ್ರೀ ಸಿದ್ಧೇಶ್ವರ ಸ್ವಾಮಿಗಳವರ ಪ್ರವಚನ ಸಾರ - ಡಾ. ಶ್ರದ್ಧಾನಂದ ಸ್ವಾಮೀಜಿ

೨೩. ಅಖಿಲ ಭಾರತ ೯ನೆಯ ಶರಣ ಸಾಹಿತ್ಯ ಸಮ್ಮೇಳನ ಸರ್ವಾಧ್ಯಕ್ಷರ ಭಾಷಣದ ಕೆಲ ವಿಚಾರಗಳು - ಡಾ. ಎಂ. ಎಸ್. ಲಠ್ಠೆ

೨೬. ಕೃಷಿ ಸಾಧಕನಿಗೆ ಡಾಕ್ಟರೇಟ್ ಗೌರವ - ಸಿದ್ಧಲಿಂಗಪ್ಪ ಬೀಳಗಿ

೨೮. ಚಿಂತನ ಚೇತನ : ಬಹುಮುಖತ್ವ - ಡಾ. ಸಂಗಮೇಶ ಹಂಡಿಗಿ

೨೯. ಶಿಶು ಚೇತನ - ಶರಣಪ್ಪ ಕಂಬ್ಯಾಣಿ

೩೦. ಆಧುನಿಕ ವಚನಕಾರರು : ಡಿ. ಲಿಂಗಯ್ಯ - ಡಾ. ಅಶೋಕ ನರೋಡೆ

೩೧. ಬರೀ ಬೆಳಗಲ್ಲೊ ಅಣ್ಣ - ಮಲ್ಲಿಕಾರ್ಜುನ ಹೆಗ್ಗಳಗಿ

೩೨. - ಹೊಸ ಪುಸ್ತಕಗಳು

# ಸಿದ್ಧಯ್ಯ ಪುರಾಣಿಕ

✍ ಜಿ. ಎಸ್. ಸಿದ್ಧಲಿಂಗಯ್ಯ

**ಜೂನ್ 18 ರಂದು ಡಾ. ಸಿದ್ಧಯ್ಯ ಪುರಾಣಿಕ ಅವರ ಜನ್ಮ ಸ್ಮರಣೋತ್ಸವ ಜರಗುವದು. ನಿಮಿತ್ಯವಾಗಿ ಈ ಲೇಖನ**

ತರಗತಿಯಲ್ಲಿ ವಿದ್ಯಾರ್ಥಿಗಳನ್ನೆಲ್ಲ ಉದ್ದೇಶಿಸಿ ಉಪಾಧ್ಯಾಯರು ಒಂದು ಪ್ರಶ್ನೆ ಹಾಕಿದರು. "ನಿಮಗೇನು ಬೇಕು, ಅದನ್ನು ಬರೆದು ತೋರಿಸಿ". ಈ ಪ್ರಶ್ನೆಗೆ ನಾನಾ ರೀತಿಯ ಉತ್ತರಗಳು ಬಂದಿದ್ದವು. ಒಬ್ಬರು ನನಗೆ ಬಳಪಬೇಕು ಎಂದರೆ ಮತ್ತೊಬ್ಬರು ಸ್ಲೇಟು; ಇನ್ನೊಬ್ಬರು ಮತ್ತೊಂದು; ಹೀಗೆಯೇ ಅದು ಇದು ಎಂದು ನೂರಾರು ಬೇಕುಗಳನ್ನು ಗುರುಗಳೆದುರು ಇಟ್ಟರು. ಇವನ್ನೆಲ್ಲ ನೋಡುತ್ತಿದ್ದ ಗುರುಗಳಿಗೆ ಬೇಸರವೂ ಆಗಿರಬೇಕು, ಎಂಥ ವಿದ್ಯಾರ್ಥಿಗಳನ್ನು ಪಡೆದಿದ್ದೇನಲ್ಲ ಎಂದು. ಆದರೆ ಮಧ್ಯದಲ್ಲೇ ಅವರ ಹುಬ್ಬು ಮೇಲೇರಿದವು; ಕಣ್ಣು ಅರಳಿದವು, ವಿಸ್ಮಯ ಹಾಗೂ ಮೆಚ್ಚುಗೆಗಳಿಂದ. ಒಬ್ಬ ವಿದ್ಯಾರ್ಥಿ ಬರೆದಿದ್ದ : "ನನಗೆ ವಿದ್ಯೆ ಬೇಕು" ಎಂದು. ಅಭಿಮಾನದಿಂದ ಗುರುಗಳು ಆ ವಿದ್ಯಾರ್ಥಿಯನ್ನೆ ದಿಟ್ಟಿಸಿ ನೋಡಿದರು. ಆ ವಿದ್ಯಾರ್ಥಿಯೇ ಮುಂದೆ ಡಾ. ಸಿದ್ಧಯ್ಯ ಪುರಾಣಿಕ ಐ.ಎ.ಎಸ್. ಎಂದು ಖ್ಯಾತನಾಮರಾದ ವ್ಯಕ್ತಿ.

ಕನ್ನಡದ ಕೆಲಸ ಮಾಡಿರುವವರನ್ನು ಹಲವು ರೀತಿಗಳಲ್ಲಿ ವರ್ಗೀಕರಿಸುವುದುಂಟು. ಅಧ್ಯಾಪಕರಾಗಿದ್ದು ಕನ್ನಡದ ಕೆಲಸ ಮಾಡಿದವರು; ಆಡಳಿತಾಧಿಕಾರಿಗಳಾಗಿದ್ದು ಕನ್ನಡದ ಕೆಲಸ ಮಾಡಿದವರು ಎಂದು. ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್, ನವರತ್ನರಾಮರಾವ್ ಇಂಥವರು ಆಡಳಿತಾಧಿಕಾರಿಗಳಾಗಿದ್ದು ಕನ್ನಡದ ಕೆಲಸ ಮಾಡಿದವರು. ಡಾ. ಸಿದ್ಧಯ್ಯ ಪುರಾಣಿಕರೂ ಇದೇ ವರ್ಗಕ್ಕೆ ಸೇರಿದವರು. ವಾಸ್ತವವಾಗಿ ಸಿದ್ಧಯ್ಯ ಪುರಾಣಿಕರು ನೌಕರಿಗೆ ಸೇರುವ ಸಂಕಲ್ಪ ಮಾಡಿದವರೇನಲ್ಲ. ಅವರ ತಂದೆಯವರ ಆಸೆಯಾದರೂ ತಮ್ಮ ಸುಪುತ್ರ ಒಬ್ಬ ವಕೀಲನಾಗಲಿ ಎಂದಿತ್ತು. ಮತ್ತೊಬ್ಬರಿಗೆ ಇವರು ಉಪಾಧ್ಯಾಯ ವೃತ್ತಿಯನ್ನು ಸ್ವೀಕರಿಸಲಿ ಎಂಬ ಭಾವನೆಯಿತ್ತು. ವಾಸ್ತವವಾಗಿ ಆದದ್ದೇ ಬೇರೆ.

ಸಿದ್ಧಯ್ಯ ಪುರಾಣಿಕರು ಜನಿಸಿದ್ದು ೧೮-೬-೧೯೧೮ ರಲ್ಲಿ. ರಾಯಚೂರು ಜಿಲ್ಲೆಯ ಯಲಬುರಗಿ ತಾಲ್ಲೂಕಿನ ದ್ಯಾಂಪುರ ಇವರು ಹುಟ್ಟಿದ ಊರು. ಶ್ರೀ ಪಂಡಿತ ಕಲ್ಲಿನಾಥ ಶಾಸ್ತ್ರೀ ಪುರಾಣಿಕ ಹಾಗೂ ಶ್ರೀಮತಿ ದಾನಮ್ಮ ಪುರಾಣಿಕರಿಗೆ ಸಂಜನಿಸಿದ ಐದು ಮಕ್ಕಳಲ್ಲಿ ಹಿರಿಯವರು ಡಾ. ಸಿದ್ಧಯ್ಯ ಪುರಾಣಿಕರು.

ಡಾ.. ಸಿದ್ಧಯ್ಯ ಪುರಾಣಿಕರು ಬಾಲ್ಯದಿಂದಲೆ ಉತ್ತಮವಾದ ಸಾಂಸ್ಕೃತಿಕ ವಾತಾವರಣ ಪಡೆದಿದ್ದರು. ಅವರ ತಂದೆಯವರಾದ ಪಂಡಿತ ಕಲ್ಲಿನಾಥ ಶಾಸ್ತ್ರಿಗಳು ನಾಲ್ಕನೆಯ ಇಯತ್ತೆಯವರೆಗೆ ಮಾತ್ರ ಕಲಿತಿದ್ದರೂ ಪ್ರತಿಭಾನ್ವಿತರಾದವರು. ಕಾವ್ಯ ನಾಟಕ ರಚನೆಗಳಲ್ಲಿ ವಿದ್ಯಾಗುರುಗಳೆನ್ನಬೇಕು. ಮನೆಯಲ್ಲೆ ಜೈಮಿನಿ ಭಾರತ, ಶಬರಶಂಕರ ವಿಳಾಸ, ಪ್ರಭುಲಿಂಗ ಲೀಲೆ ಮೊದಲಾದ ಕಾವ್ಯಗಳನ್ನೂ ವ್ಯಾಕರಣ ಛಂದಸ್ಸು ಶಾಸ್ತ್ರಗಳನ್ನೂ ವಚನ, ಸುಭಾಷಿತಗಳು, ಹಾಡುಗಳು, ಶತಕ ಮೊದಲಾದವುಗಳನ್ನು ಕಲಿಸಿದರು. ಒಳ್ಳೆಯ ಪ್ರವಚನಕಾರರೂ ಆಗಿದ್ದುದರಿಂದ ಮನೆಯಲ್ಲಿ ಆಗಾಗ ಪ್ರವಚನ ಹಾಗೂ ಕಾವ್ಯಾಧ್ಯಯನಗಳೂ ನಡೆಯುತ್ತಿದ್ದು ಪುರಾಣಿಕರ ಮನಸ್ಸಿನ ಮೇಲೆ ಅಪೂರ್ವವಾದ ಪ್ರಭಾವವನ್ನು ಬೀರಿದ್ದವು. ತಮ್ಮ ತಂದೆಯವರು ಬರೆದು ಆಡಿಸುತ್ತಿದ್ದ ನಾಟಕ, ಆಗಾಗ ರಚಿಸಿ ಹಾಡುತ್ತಿದ್ದ ಕವಿತೆ ಇವುಗಳನ್ನು ಕೇಳಿದಾಗಲೆಲ್ಲ ಪುರಾಣಿಕರ ಮನಸ್ಸಿನಲ್ಲಿ ತಾನೂ ಹಾಗಾಗಬೇಕೆನ್ನುವ ಹಂಬಲ.

ಇವರ ಅಜ್ಜಂದಿರಾದ ಕವಿರತ್ನ ಚೆನ್ನಕವಿಗಳಂತೂ ಕವಿಗಳೆಂದೇ ಖ್ಯಾತರಾದವರು. ಸೋದರಮಾವನಾದ ಕಾಲ ಕಾಲೇಶ್ವರ ಶಾಸ್ತ್ರಿಗಳಂತು ದೊಡ್ಡ ವೇದಾಂತಿಗಳು. ವಿದ್ವತ್ತು; ಕಾವ್ಯ ರಚನೆ ; ಪುರಾಣ ಪ್ರವಚನ ಹಾಗೂ ತಾತ್ವಿಕ ಜಿಜ್ಞಾಸೆಗಳ ಅಪರೂಪವಾದ ವಾತಾವರಣ ಮನೆಯಲ್ಲೆ ದೊರೆತದ್ದು ಪುರಾಣಿಕರ ಪುಣ್ಯ. ಬಾಲ್ಯದಿಂದ ಅವರಿಗರಿವಿಲ್ಲದಂತೆಯೇ ಸಾಹಿತ್ಯವೆನ್ನುವುದು ಬದುಕಿನ ಒಂದು ಅವಿಭಾಜ್ಯ ಅಂಗವಾಗಿಬಿಟ್ಟಿತು. ಮುಂದೆ ಶರಣ ಸಾಹಿತ್ಯದಲ್ಲಿ ಅವರು ಮಾಡಿರುವ ಕಾರ್ಯಗಳ ಸಾಧನೆಯನ್ನು ಮೆಚ್ಚುವವರು ಅದಕ್ಕೆ ಅಗತ್ಯವಾದ ವಾತಾವರಣ ಹಾಗೂ ಸ್ಫೂರ್ತಿಗಳು ಬಾಲ್ಯದಿಂದಲೆ ಒದಗಿದ್ದವೆಂಬುದನ್ನು ಮರೆಯಲಾಗುವುದಿಲ್ಲ.

ಸಿದ್ಧಯ್ಯ ಪುರಾಣಿಕರದು ತುಂಬ ಶಿಸ್ತಿನಿಂದ ಕೂಡಿದ ಅಧ್ಯಯನಶೀಲ ಪ್ರವೃತ್ತಿ. ವ್ಯಾಯಾಮದಿಂದ ಶರೀರವನ್ನು ದೃಢಗೊಳಿಸಿಕೊಳ್ಳುವ ಹಾಗೆಯೇ ಸಾಹಿತ್ಯಾಧ್ಯಯನದಿಂದ ಮನಸ್ಸನ್ನು ಶಕ್ತಗೊಳಿಸಿಕೊಂಡವರು. ಏಕಾಗ್ರತೆಯೆನ್ನುವುದು ಅವರಿಗೆ ವರವಾಗಿತ್ತು. ಹೀಗಾಗಿಯೇ ಅವರು ವಿದ್ಯಾರ್ಥಿ ಜೀವನದ ಉದ್ದಕ್ಕೂ ತಮ್ಮ ಉತ್ತಮವಾದ ಮಟ್ಟವನ್ನು ಉಳಿಸಿಕೊಂಡು ಬಂದದ್ದೇ ಅಲ್ಲದೆ ಪರೀಕ್ಷೆಗಳಲ್ಲೂ ಅವರು ಗೌರವದ ಸ್ಥಾನವನ್ನು ಉಳಿಸಿಕೊಳ್ಳುತ್ತಲೆ ಬಂದವರು. ಮಾಧ್ಯಮಿಕ ಪರೀಕ್ಷೆಯಿಂದ ಕೊನೆಯ ಬಿ.ಎ. ಪರೀಕ್ಷೆವರೆಗೂ ಶ್ರೇಷ್ಠತೆಯನ್ನು ಉಳಿಸಿಕೊಂಡೇ ಬಂದ ಅವರ ಕುಶಾಗ್ರಮತಿಗೆ ಮಿಡಲ್ ಪರೀಕ್ಷೆಯಲ್ಲೆ ಅಪೂರ್ವವಾದ ಸ್ಥಾನ ದೊರಕಿದ್ದು ಉಲ್ಲೇಖನಾರ್ಹ. ವಾಸ್ತವವಾಗಿ ಮಿಡಲ್ ತರಗತಿಯಲ್ಲಿ ಶ್ರೇಷ್ಟತೆಯನ್ನು ಮೆರೆದ ಸಿದ್ಧಯ್ಯ ಪುರಾಣಿಕರು ವರ್ಷ ಮಧ್ಯೆ ನಡೆದ ಟೆಸ್ಟ್‌ನಲ್ಲಿ ಪ್ರಥಮಸ್ಥಾನ ಪಡೆದರು. ಮುಂದೆ ಪರೀಕ್ಷೆಗೂ ಕುಳಿತುಕೊಳ್ಳಲಾಗದಂಥ ಅನಾರೋಗ್ಯವಾದಾಗ ವರ್ಷವೆಲ್ಲ ನಷ್ಟವಾಯಿತೇನೊ ಎಂದು ಇವರು ಕಂಗೆಟ್ಟಿದ್ದಾಗ ಶಾಲೆಯ ಗುರುಗಳು ಇವರ ಬುದ್ಧಿಮತ್ತೆಯನ್ನೂ ಅನಂತರ ಟೆಸ್ಟ್‌ನಲ್ಲಿ

ತೋರಿದ್ದ ಪ್ರತಿಭೆಯನ್ನೂ ಲಕ್ಷ್ಯವಾಗಿಟ್ಟುಕೊಂಡು ಇವರ ಫಲಿತಾಂಶವನ್ನು ಪ್ರಕಟಿಸುವಾಗ ಪ್ರಥಮರೆಂದೇ ಪ್ರಕಟಿಸಿದ್ದು, ಇವರ ಗುರುಗಳ ಔದಾರ್ಯ ಹಾಗೂ ಅರ್ಹತೆಯನ್ನು ಗುರುತಿಸುವ ಮುಕ್ತ ಮನಸ್ಸನ್ನು ಸೂಚಿಸುವುದು. ಅಲ್ಲದೆ ಈ ಘಟನೆ ಇವರು ಅಧ್ಯಾಪಕರಿಂದ ಗಳಿಸಿಕೊಂಡಿದ್ದ ಮೆಚ್ಚುಗೆ ಅಭಿಮಾನಗಳಿಗೆ ದ್ಯೋತಕವಾಗಿತ್ತು. ಮುಂದಂತೂ ಒಂದಾದ ಮೇಲೊಂದರಂತೆ ಪರೀಕ್ಷೆಗಳಲ್ಲಿ ಉತ್ತಮತೆಯನ್ನೆ ತೋರುತ್ತ ನಡೆದವರು ಇವರು. ಎಲ್.ಎಲ್.ಬಿ. ಪರೀಕ್ಷೆಯೊಂದನ್ನು ಉಳಿದರೆ ಮಿಕ್ಕಲ್ಲೆಲ್ಲ ಪರೀಕ್ಷೆಗಳನ್ನು ನಿರಾಯಾಸವಾಗಿ ಎದುರಿಸಿ ಯಶಸ್ಸು ಗಳಿಸಿದವರು. ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಇಂಗ್ಲೀಷ್ ಕನ್ನಡಗಳಲ್ಲಿ ಪ್ರಥಮ ಸ್ಥಾನವನ್ನೂ ಒಟ್ಟು ಅಂಕಗಳಲ್ಲಿ ತೃತೀಯ ಸ್ಥಾನವನ್ನೂ ಗಳಿಸಿದರು. ಇಂಟರ್ ಪರೀಕ್ಷೆಯಲ್ಲೂ ಇದೇ ರೀತಿಯ ಯಶಸ್ಸು ಕನ್ನಡ ಸಂಸ್ಕೃತಗಳಲ್ಲಿ ಬಿ.ಎ. ಪರೀಕ್ಷೆಯಲ್ಲಿ ಎಲ್ಲ ವಿಷಯಗಳಲ್ಲಿ ಹಾಗೂ ಒಟ್ಟಿನಲ್ಲಿ ಪ್ರಥಮ ಸ್ಥಾನ. ಎಲ್ಲ ಪರೀಕ್ಷೆಗಳಲ್ಲೂ ಉತ್ತಮಿಕೆಯನ್ನೆ ಮೆರೆದ ಸಿದ್ಧಯ್ಯ ಪುರಾಣಿಕರು ಕನ್ನಡದತ್ತ ಬಂದದ್ದು ಒಂದು ಯೋಗಾ ಯೋಗ.

ಪ್ರೌಢಶಾಲೆಯಲ್ಲಿದ್ದಾಗ ಇವರು ಬಯಸಿದ್ದು ಯಂತ್ರಜ್ಞನಾಗಬೇಕೆಂದು. ಅದಕ್ಕಾಗಿ ಉನ್ನತ ಗಣಿತಶಾಸ್ತ್ರವನ್ನು ಐಚ್ಛಿಕ ವಿಷಯವನ್ನಾಗಿ ಇವರು ಆಯ್ಕೆ ಮಾಡಿಕೊಂಡಿದ್ದರು. ಇವರ ಮೆಚ್ಚಿನ ಗುರುಗಳಾದ ಮೌಲಾನಾ ರಹಮತುಲ್ಲಾ ಖಾನ್ ಸಾಹೇಬರು ಹೋಮ್‌ವರ್ಕ್ ಬಗ್ಗೆ ತುಂಬ ಕಟ್ಟುನಿಟ್ಟಿನವರಾಗಿದ್ದು ಒಂದು ದಿನ ಸಿದ್ಧಯ್ಯ ಪುರಾಣಿಕರು ಮನೆಗೆಲಸ ಮಾಡಿರದ್ದರಿಂದ ಗುರುಗಳು ಸಿಟ್ಟಾದದ್ದೇ ಅಲ್ಲದೆ ಈ ವಿಷಯ ಬಿಟ್ಟು ಬೇರೆಯದನ್ನು ಆರಿಸಿಕೋ ಹೋಗು ಎಂದು ಗದರಿಬಿಟ್ಟರು. ಸಿದ್ಧಯ್ಯ ಪುರಾಣಿಕರು ಸ್ವಲ್ಪ ವಿಚಲಿತರಾದದ್ದು ನಿಜ. ಆದರೆ ಸ್ವಾಭಿಮಾನಿಯಾಗಿದ್ದ ಇವರು ತಟ್ಟನೆ ಒಂದು ನಿರ್ಧಾರಕ್ಕೆ ಬಂದೇ ಬಿಟ್ಟರು. ಕನ್ನಡಕ್ಕೆ ಹೆಸರಾಗಿದ್ದ ತವಗ ಭೀಮಸೇನ ರಾಯರ ಬಳಿಗೆ ಹೋಗಿ ಕನ್ನಡವನ್ನು ಐಚ್ಛಿಕವಾಗಿ ಓದುವ ಇಚ್ಛೆಯನ್ನು ವ್ಯಕ್ತಗೊಳಿಸಿದರು. ಅವರೂ ಅತ್ಯಂತ ಪ್ರೀತಿಯಿಂದ ಕನ್ನಡವನ್ನು ಐಚ್ಛಿಕವಾಗಿ ಆರಿಸಿಕೊಳ್ಳಲು ಅನುಮತಿಸಿದರು. ಇಷ್ಟೆಲ್ಲ ಆದರೂ ಗಣಿತಶಾಸ್ತ್ರದ ಅಧ್ಯಾಪಕರು ಇವರ ಮೇಲೆ ಯಾವುದೇ ರೀತಿಯ ಆಕ್ರೋಶ ಸೇಡುಗಳನ್ನು ತೋರದಿದ್ದುದು ಅಂದಿನ ಅಧ್ಯಾಪಕ ವೃತ್ತಿಯವರ ಸದ್ಗುಣಗಳಿಗೆ ಸಾಕ್ಷಿಯಾಗಿತ್ತು. ಅಂತು ಸಿದ್ಧಯ್ಯನವರು ಯಂತ್ರಜ್ಞನಾಗುವುದನ್ನು ಬಿಟ್ಟು ಕನ್ನಡದ ಕಡೆಗೆ ಹೊರಳಿದ್ದು ಹೀಗೆ.

ಸಿದ್ಧಯ್ಯ ಪುರಾಣಿಕರು ಅಧ್ಯಯನ ಮಾಡುತ್ತಿದ್ದಾಗ ಅವರಿಗೆ ನೆರವಾದವರು ಒಬ್ಬಿಬ್ಬರಲ್ಲ. ಅಂಥ ಉದಾರಚರಿತರೂ ಶಿಷ್ಯವತ್ಸಲರೂ ಆದ ಗುರುಗಳ ಪಟ್ಟಿಯೇ ಇದೆ. ಅವರಲ್ಲಿ ಮುಖ್ಯರಾದವರು ಅಲಿಬನ್ ಗಾಲಿಬ್ ಸಾಹೇಬರು, ಮೀನಾಯಿ ಸಾಹೇಬರು, ಇಮಾಮ್ ಸಾಹೇಬರು, ಅಜೀಜ್ ಖಾನ್ ಸಾಹೇಬರು, ಹಕ್ಕನಿ ಸಾಹೇಬರು ಮತ್ತು ಹುಸೇನ ಅಲೀಖಾನ ಸಹೇಬರ ದೊಡ್ಡ ಗುಣಗಳನ್ನು ಸಿದ್ಧಯ್ಯನವರು ಮತ್ತೆ ಮತ್ತೆ ನೆನೆಯುತ್ತಾರೆ. ಅಷ್ಟೇ ಅಲ್ಲ ಅವರ ಬದುಕಿನಲ್ಲಿ ಅದರಲ್ಲೂ ಅವರು ತಹಶೀಲ್ದಾರರಾಗಿ ಆಯ್ಕೆಯಾಗುವ ಸಂದರ್ಭದಲ್ಲಿ ಹುಸೇನ ಅಲೀಖಾನರು ಸ್ವಂತ ಮಗನನ್ನು ಬಿಟ್ಟು ಇವರ ಬಗ್ಗೆ ಮಾಡಿದ ಶಿಫಾರಸನ್ನು ಅಷ್ಟೆ ಕೃತಜ್ಞತೆಯಿಂದ ಸ್ಮರಿಸುತ್ತಾರೆ.

ಅಧ್ಯಯನದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಂತೆಯೇ ಸಿದ್ಧಯ್ಯನವರು ಕನ್ನಡದ ಕೆಲಸಗಳಲ್ಲೂ ವಿದ್ಯಾರ್ಥಿ ದೆಸೆಯಿಂದಲೇ ಅತ್ಯಂತ ಕ್ರಿಯಾತ್ಮಕವಾಗಿ ಪಾಲ್ಗೊಂಡವರು. ಕಲಬುರಗಿ ಕಾಲೇಜು ಯೂನಿಯನ್ನಿನ ಕಾರ್ಯದರ್ಶಿ, ಕನ್ನಡ ಸಂಘದ ಕಾರ್ಯದರ್ಶಿ, ವಿಶ್ವವಿದ್ಯಾಲಯ ಕರ್ನಾಟಕ ಸಂಘದ ಉಪಾಧ್ಯಕ್ಷ ಹೀಗೆ ಹಲವಾರು ಹಂತಗಳಲ್ಲಿ ವಿದ್ಯಾರ್ಥಿ ಸಂಘಟನೆಗಳು ಹಾಗೂ ಕನ್ನಡದ ಸಂಘಗಳಲ್ಲಿ ಕ್ರಿಯಾತ್ಮಕವಾಗಿ ಪಾಲ್ಗೊಂಡವರು ಇವರು. ಕನ್ನಡದ ಚಳವಳಿಗಳಲ್ಲಿ ವಿದ್ಯಾರ್ಥಿ ದೆಸೆಯಿಂದಲೆ ಪಾಲ್ಗೊಂಡ ಸಿದ್ಧಯ್ಯನವರು ಸಹಜವಾಗಿಯೇ ಅವರು ಉದ್ಯೋಗಕ್ಕೆ ಸೇರಿದ ಮೇಲೂ ಕನ್ನಡದ ಕೆಲಸವನ್ನು ಕೈಗೆತ್ತಿಕೊಂಡವರು, ಹಾಗಾಗಿಯೇ ಅವರು ಮುಂದೆ ಏಕೆ ಇಂದೂ ಕನ್ನಡದ ಕೆಲಸಗಳಿಗೆ ಹಾಗೂ ಹೋರಾಟಗಳಿಗೆ ಮುಂದಾದವರೇ ಆಗಿದ್ದಾರೆ.

ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೆ ಕಲಬುರ್ಗಿಯಲ್ಲಿ ನಡೆದ ಕವನ ಸ್ಪರ್ಧೆಯಲ್ಲಿ ಪ್ರಥಮಸ್ಥಾನ ಗಳಿಸಿದ ಸಿದ್ಧಯ್ಯನವರು ಕವಿಯೆಂಬ ಹೆಮ್ಮೆಗೂ ಪಾತ್ರರಾದರು. ಜಯಕರ್ನಾಟಕದಲ್ಲಿ ಇವರ ಪದ್ಯವೊಂದು ಅಚ್ಚೂ ಆಯಿತು. ಹೀಗೆಯೇ ಇವರ ಕವಿತೆಯೊಂದು ಇವರು ಆಲಮಟ್ಟಿಯಲ್ಲಿದ್ದಾಗ ಶರಣ ಸಂದೇಶ ಪತ್ರಿಕೆಯಲ್ಲಿ ಪ್ರಕಟವಾಯಿತು. ಕಾವ್ಯದೇವಿ ಎಂಬ ನೀಳ್ಗವಿತೆಯಲ್ಲಿರುವ ಸಾಲುಗಳು ನಿನ್ನಾತ್ಮವಾನಂದ ನನ್ನಾತ್ಮ ಕಾವ್ಯ! ಇಂತು ಕಾವ್ಯಾನಂದ ನಾಮ ಸುಶ್ರಾವ್ಯ. ಕವಿ ಸಿದ್ಧಯ್ಯ ಪುರಾಣಿಕರು ಕಾವ್ಯಾನಂದರಾದ ರೀತಿ ಇದು.

ಅಧ್ಯಯನ, ಕಾವ್ಯ ರಚನೆ, ಸಾಹಿತ್ಯ ಪ್ರೇಮಗಳಿಂದ ಬದುಕಿಗೆ ಒಂದು ಆದರ್ಶವನ್ನು ಕಟ್ಟಿಕೊಳ್ಳುತ್ತಿದ್ದ ಕಾಲದಲ್ಲೆ ಮದುವೆಯ ಒತ್ತಡ ಬಂದಾಗ ತಂದೆಗೆ ಸುದ್ದಿ ಕೊಡದೆ ಹರ್ಡೇಕರ ಮಂಜಪ್ಪನವರ ಆಶ್ರಯದಲ್ಲಿ ಆಶ್ರಯ ಪಡೆದಿದ್ದು ಉಂಟು. ಯೋಗ, ಅಧ್ಯಯನ ಹಾಗೂ ಮಂಜಪ್ಪನವರ ಪ್ರಭಾವಗಳಿಂದ ಮನಸ್ಸು ಸ್ವಲ್ಪಮಟ್ಟಿಗೆ ವೇದಾಂತದ ಕಡೆಗೆ ಎಳೆಯುತ್ತ ಇದ್ದುದೂ ಉಂಟು. ಆದರೆ ಸಂಗ್ರಾಮಪ್ಪನವರಿಂದ ಬಂದ ಸುದೀರ್ಘ ಪತ್ರ ಇವರ ಬದುಕಿನ ದಿಕ್ಕನ್ನು ಬದಲಿಸಲು ಕಾರಣವಾದದ್ದು ಮಾತ್ರ ನಿಜ. ಉದಗಿರಿಯ ಹಾವಗಿಸ್ವಾಮಿ ಮಠ ಆ ಭಾಗದ ಪ್ರಸಿದ್ಧ ಮಠವಾಗಿದ್ದು ಅದಕ್ಕೆ ಪೀಠಾಧ್ಯಕ್ಷರಾಗಲು ನಿಮ್ಮ ಮಗನನ್ನು ದಾನವಾಗಿ ನೀಡಬೇಕೆಂದು ಸಿದ್ಧಯ್ಯ ಪುರಾಣಿಕರ ತಂದೆಯವರಿಗೆ ಬಂದ ಪತ್ರ, ಅದು. ಅವರು ಆ ಪತ್ರವನ್ನೋದಿ ಮಂಕಾದುದೇನೊ

ನಿಜ, ಆದರೆ ಅದನ್ನು ಮಗನ ಕೈಯಲ್ಲಿಟ್ಟು ಈ ಬಗ್ಗೆ ನಿನ್ನ ತೀರ್ಮಾನವೇ ನಮ್ಮೆಲ್ಲರ ತೀರ್ಮಾನ ಎಂದು ಹೇಳಿದಂತೆಯೇ ನಡೆದುಕೊಂಡರು. ಸಿದ್ಧಯ್ಯನವರು ಬಹಳಷ್ಟು ಯೋಚಿಸಿದರು. ತಂದೆಯವರ ಬಡತನ, ತಮ್ಮಂದಿರ ಕಾರ್ಪಣ್ಯದ ಸ್ಥಿತಿ ಇವುಗಳೆಲ್ಲ ಕಣ್ಣೆದುರು ನಿಂತವು. ಸಂಯಮಿಯೆಂದು ಖ್ಯಾತರಾಗಿದ್ದ ಸಿದ್ಧಯ್ಯನವರು ತಾವು ಮೆಚ್ಚಿದ್ದ ಗವಿಯೊಂದರಲ್ಲಿದ್ದ ಯೋಗಿಯನ್ನೇ ಈ ಬಗ್ಗೆ ಸಲಹೆ ಕೇಳಲು ಹೊರಟರು. ಗುಹೆಯ ಸಮೀಪ ಬರುತ್ತಿದ್ದಾಗ ಕಂಡ ಭೋಗದ ದೃಶ್ಯ ಅವರ ಮನಸ್ಸನ್ನು ಕ್ಷಣಕಾಲ ಗೊಂದಲದಲ್ಲಿ ಬೀಳಿಸಿದರೂ ಬದುಕಿನ ಹಾದಿ ಅವರಿಗೀಗ ನಿಚ್ಚಳವಾಗಿತ್ತು. ಸನ್ಯಾಸಿಯಾಗುವ ಹಂಬಲವನ್ನು ದೂರ ಮಾಡಿಬಿಟ್ಟರು.

ಬಿ.ಎ. ತೇರ್ಗಡೆಯಾಗಿ ವಿಶ್ವವಿದ್ಯಾಲಯಕ್ಕೆ ಪ್ರಥಮರಾದಾಗ ವಕೀಲರಾಗುವ ಸಲಹೆ ಮೇಲೆ ಎಲ್.ಎಲ್.ಬಿ. ಪರೀಕ್ಷೆಗೂ ಕುಳಿತರು. ದುರ್ದೈವಕ್ಕೆ ಮೊದಲ ಬಾರಿಗೆ ಇದೊಂದು ಪರೀಕ್ಷೆಯಲ್ಲಿ ಮೊದಲಿಗೆ ಅವರು ಅಪಯಶಸ್ಸು ಪಡೆಯಬೇಕಾಯಿತಾದರೂ ಮುಂದೆ ನೌಕರಿ ಸೇರಿದ ಮೇಲೆ ಅದರಲ್ಲೂ ತೇರ್ಗಡೆಯಾದರು. ಬಿ.ಎ. ಪರೀಕ್ಷೆಯಲ್ಲಿ ವಿಶ್ವವಿದ್ಯಾಲಯಕ್ಕೆ ಮೊದಲಿಗರಾದ ಸಿದ್ಧಯ್ಯ ಪುರಾಣಿಕರು ತಹಶೀಲ್ದಾರರಾಗಿ ಆಯ್ಕೆಯಾದರು. ಈ ಆಯ್ಕೆಯ ಹಿನ್ನೆಲೆಯಲ್ಲಿ ಹುಸೇನ ಅಲಿಖಾನರ ಪಾತ್ರವಂತೂ ಅನನ್ಯವಾದದ್ದು. ೧೯೪೩ ರಲ್ಲಿ ತಹಶೀಲ್ದಾರರಾಗಿ ಆಯ್ಕೆಗೊಂಡ ಇವರು ವೃತ್ತಿ ತರಬೇತಿ ನಡೆಸಿದ್ದು ಮತ್ತೊಂದು ಸಾಹಸದ ಕಥೆ. ಮುಂದೆ ಅವರು ನಾಂದೇಡ, ಕಲಬುರಗಿ, ತಾಂಡೂರು, ಯಾದಗಿರಿ, ಬೆಂಗಳೂರು, ಮಡಿಕೇರಿ, ಬೆಳಗಾವಿಗಳಲ್ಲಿ ಸೇವೆ ಸಲ್ಲಿಸಿ ಬೆಂಗಳೂರಿನಲ್ಲಿ ನಿವೃತ್ತರಾದರು. ತಹಶೀಲ್ದಾರರಾಗಿ ನೌಕರಿಗೆ ಸೇರಿದ ಅವರು ಹೈದರಾಬಾದು ಸಂಸ್ಥಾನದಲ್ಲಿದ್ದು ಪಡೆದ ಅನುಭವ ಅಪಾರವಾದದ್ದು. ಅವರಿಗೊದಗಿದ ವಿಪತ್ತುಗಳೂ ಕೆಲವಲ್ಲ. ಆದರೆ ಒಪ್ಪಿಕೊಂಡ ಕೆಲಸವನ್ನು ಅತ್ಯಂತ ಪ್ರೀತಿ, ದಕ್ಷತೆಗಳಿಂದ ನಿರ್ವಹಿಸಿ ಕರ್ತವ್ಯ ಎನ್ನುವುದು ಸೇವೆಯ ಅವಕಾಶ ಎಂದು ಭಾವಿಸಿದ ಸಿದ್ಧಯ್ಯ ಪುರಾಣಿಕರು ಡೆಪ್ಯೂಟಿ ಕಲೆಕ್ಟರ್, ಅಧೀನ ಕಾರ್ಯದರ್ಶಿ, ಉಪಕಾರ್ಯದರ್ಶಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ಮುಖ್ಯಾಧಿಕಾರಿ, ಜಿಲ್ಲಾಧಿಕಾರಿ, ಸಾರಿಗೆ ಕಮಿಷನರ್, ಕಾರ್ಮಿಕ ಕಮಿಷನರ್ ಹೀಗೆ ವಿವಿಧ ಹಂತಗಳಲ್ಲಿ ಹಾಗೂ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ ಇವರು ಬಹುಮುಖವಾಗಿ ಜನಪರವಾದ ಕಾರ್ಯಗಳನ್ನು ಮಾಡಿದವರು.

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿದಾಗಲೆ ಕನ್ನಡದ ಕೆಲಸಕ್ಕಾಗಿ ಬಿ.ಎಂ.ಶ್ರೀ., ಎ.ಎನ್.ಮೂರ್ತಿರಾವ್, ಡಾ. ಮಾಸ್ತಿವೆಂಕಟೇಶ ಅಯ್ಯಂಗಾರ್, ವಿ. ಸೀತಾರಾಮಯ್ಯ ಮೊದಲಾದ ಸಾಹಿತ್ಯ ಕ್ಷೇತ್ರದ ದಿಗ್ಗಜಗಳನ್ನು ಕರಯಿಸಿ ಕನ್ನಡದ ಕಹಳೆಯನ್ನು ಮೊಳಗಿಸಿದ್ದೇ ಅಲ್ಲದೆ ಕನ್ನಡದ ವಾತಾವರಣ ನಿರ್ಮಾಣಕಾರ್ಯದಲ್ಲಿ ಸಿದ್ಧಯ್ಯ ಪುರಾಣಿಕರು ವಹಿಸಿದ ಪಾತ್ರ ಮಹತ್ವದ್ದು. ಈಗಿನ ಬೀದರ್, ರಾಯಚೂರು, ಗುಲ್ಬರ್ಗಾ ಹಾಗೂ ಬಿಜಾಪುರ ಜಿಲ್ಲೆಗಳಲ್ಲಿ ಕನ್ನಡದ ಕೆಲಸ ಆಗುವುದಕ್ಕೆ ಕಾರಣರಾದ ಪ್ರಾತಃಸ್ಮರಣೀಯರೆಂದರೆ ಜಯದೇವಿ ತಾಯಿ ಲಿಗಾಡೆ, ಹರ್ಡೇಕರ ಮಂಜಪ್ಪ, ಡೆಪ್ಯೂಟಿ ಚನ್ನಪ್ಪ ಮೊದಲಾದವರು. ಈ ಮಹಾ ಕಾರ್ಯದಲ್ಲಿ ಸಿದ್ಧಯ್ಯ ಪುರಾಣಿಕರ ಪಾತ್ರ ಸಾಮಾನ್ಯವಾದುದಲ್ಲ.

೩೦-೬-೧೯೭೬ ರಲ್ಲಿ ನಿವೃತ್ತರಾದ ಸಿದ್ಧಯ್ಯ ಪುರಾಣಿಕರಿಗೆ ತಮ್ಮ ಸೇವಾವಧಿಯ ಬಗ್ಗೆ ತೃಪ್ತಿ ಹಾಗೂ ಹೆಮ್ಮೆಗಳಿವೆ. ಜನಪರ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ಬಗ್ಗೆ ಮಡಿಕೇರಿ, ಬೆಳಗಾವಿ ಜಿಲ್ಲೆಗಳ ಜನರು ಇಂದಿಗೂ ಇವರ ಕಾಲದ ಸಾಧನೆಗಳ ಬಗ್ಗೆ ಮಾತಾಡಿಕೊಳ್ಳುವುದನ್ನು ಅಭಿಮಾನದಿಂದ ನೆನೆದುಕೊಳ್ಳುತ್ತಾರೆ. ಅಷ್ಟೇ ಅಲ್ಲ ಕನ್ನಡದ ವಿಶ್ವಕೋಶ ಯೋಜನೆ, ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಯೋಜನೆ, ಸರ್ಕಾರದಿಂದ ಪ್ರಕಟವಾದ ಸುಲಭಾವೃತ್ತಿಯ ಲೀಲಾವತಿ ಪ್ರಬಂಧ, ಹರಿಶ್ಚಂದ್ರ ಕಾವ್ಯ, ಜೈಮಿನಿ ಭಾರತ, ವಚನ ಸಾಹಿತ್ಯ ಸಂಗ್ರಹ, ಸರ್ವಜ್ಞನ ವಚನಗಳಂಥ ಕೃತಿಗಳ ಪ್ರಕಟನೆಯ ಯೋಜನೆಗಳಲ್ಲಿ ತಾವು ವಹಿಸಿದ ಪಾತ್ರವನ್ನು ಅಭಿಮಾನದಿಂದ ಉಲ್ಲೇಖಿಸುತ್ತಾರೆ.

ಅಮಲ್ದಾರರಾಗಿ ನೇಮಕಗೊಂಡ ಸ್ವಲ್ಪ ಕಾಲದಲ್ಲಿಯೇ ಸಿದ್ಧಯ್ಯ ಪುರಾಣಿಕರು ಮದುವೆಯಾಗಬೇಕಾಯಿತು. ತಾವು ನೋಡಿ ಮೆಚ್ಚಿದ್ದ ಗಿರಿಜಾದೇವಿಯವರ ಕೈಹಿಡಿದ ಇವರ ಕುಟುಂಬ ವಿಜಯಾ, ಶಿವಗೀತಾ ಮತ್ತು ಭಾರತಿ ಎಂಬ ಮೂವರು ಹೆಣ್ಣು ಮಕ್ಕಳು ಹಾಗೂ ಪ್ರಸನ್ನಕುಮಾರ ಎಂಬ ಪುತ್ರರನ್ನು ಪಡೆದು ಸುಖಸಮೃದ್ಧಿಗಳ ಆಗರವಾಗಿದೆ.

ಸಿದ್ಧಯ್ಯ ಪುರಾಣಿಕರು ವೃತ್ತಿಯಲ್ಲಿ ಅಧಿಕಾರಿಗಳಾಗಿದ್ದರೂ ಪ್ರವೃತ್ತಿಯಲ್ಲಿ ಸಾಹಿತಿಗಳು. ಅವರ ಸಾಹಿತ್ಯರಾಶಿ ವಿಪುಲವಾಗಿದೆ ಹಾಗೂ ವೈವಿಧ್ಯಮಯವೂ ಆಗಿದೆ. ಆತ್ಮಾರ್ಪಣೆ, ಭಾರತವೀರ, ರಜತ ರೇಖೆ, ಭಿನ್ನನೂಪುರು ಅಲ್ಲದೆ ಕೆಲವು ಗೇಹ ನಾಟಕಗಳು ಎಂಬ ನಾಟಕಗಳನ್ನವರು ರಚಿಸಿದ್ದಾರೆ. ಭಾರತವೀರ ನಾಟಕ ಚೀನಿಯರ ದಾಳಿಯ ಸಂದರ್ಭದಲ್ಲಿ ಹುಟ್ಟಿದ್ದು. ತ್ರಿಭುವನ ಮಲ್ಲ ಎಂಬ ಕಾದಂಬರಿಯೂ ಇವರದೆ. ವಿಕಾಸವಾಣಿ ಎಂಬುದು ವಯಸ್ಕರಿಗಾಗಿ ಬರೆದ ಕೃತಿ. ಮಕ್ಕಳಿಗಾಗಿ ತುಪ್ಪಾರೊಟ್ಟಿ ಗೇಗೇಗೇ, ಗಿಲ್ ಗಿಲ್ ಗಿಲಗಚ್ಚಿ, ತಿರುಗೆಲೆ ತಿರುಗೆಲೆ ತಿರುಗುಯ್ಯಾಲೆ, ನ್ಯಾಯ ನಿರ್ಣಯ, ಮಕ್ಕಳ ಲೋಕ ಸಂಚಾರ, ಬಣ್ಣ ಬಣ್ಣದ ಓಕುಳಿ ಎಂಬ ಆರು ಕೃತಿಗಳನ್ನು ರಚಿಸಿದ್ದಾರೆ ಬಸವಣ್ಣನವರ ಜೀವನ ಹಾಗೂ ಸಂದೇಶ, ಮಹಾದೇವಿ, ಹರ್ಡೇಕರ ಮಂಜಪ್ಪನವರು, ಸಿದ್ಧರಾಮ, ಮಿರ್ಜಾಗಾಲಿಬ್ ಎಂಬ ಜೀವನ ಚರಿತ್ರೆಗಳನ್ನು

ರಚಿಸಿದ್ದಾರೆ. ಕಥಾ ಮಂಜರಿ ಹಾಗೂ ತುಷಾರ ಹಾರ ಎಂಬ ಎರಡು ಕಥಾ ಸಂಕಲನಗಳನ್ನು ಬರೆದಿದ್ದಾರೆ. ಹದಿಮೂರಕ್ಕೂ ಹೆಚ್ಚು ಕೃತಿಗಳ ಸಂಪಾದನೆ ಕಾರ್ಯವನ್ನು ಮಾಡಿದ್ದಾರೆ. ಇವುಗಳಲ್ಲಿ ಕೆಲವು ಅನ್ಯರೊಡನೆ ಸಂಪಾದಿಸಿದುವಾಗಿವೆ.

ಜಲಪಾತ, ಕರುಣಾ ಶ್ರಾವಣ, ಮಾನಸ ಸರೋವರ, ಮೊದಲು ಮಾನವನಾಗು, ಕಲ್ಲೋಲ ಮಾಲೆ, ಚರಗ ಎಂಬ ಏಳು ಕವನ ಸಂಕಲನಗಳು ಪ್ರಕಟವಾಗಿವೆ. ಕುವೆಂಪು, ಅಂಬಿಕಾತನಯದತ್ತ, ಡಿ.ಎಸ್.ಕರ್ಕಿ ಮೊದಲಾದವರ ಮೆಚ್ಚುಗೆಗೆ ಪಾತ್ರವಾದ ಇವರ ಕಾವ್ಯ ನವೋದಯ ಮಾರ್ಗಕ್ಕೆ ಸೇರಿದ್ದುದಾಗಿದೆ. ಸಿರಿಗನ್ನಡದ ಜ್ಯೋತಿ, ಮೊದಲು ಮಾನವನಾಗು, ತಾಜಮಹಲು ಕವಿತೆಗಳಂತೂ ತುಂಬ ಮೆಚ್ಚುಗೆಗೆ ಪಾತ್ರವಾಗಿ ಬಿಟ್ಟಿವೆ. ಅವರ ಕಾವ್ಯದ ಶೃತಿಯೆನ್ನುವಂತಿವೆ ಈ ಕೆಲವು ಪಂಕ್ತಿಗಳು.

ಮಾನವರು ಕೆಟ್ಟಾರು
ಮಾನವತೆ ಉಳಿದೀತು !
ಕವಿ ದೇಹ ಬಿಟ್ಟಾನು
ಕವಿತೆಯುಳಿದೀತು !
ಕೃತಿಗಿಳಿಯದಿದ್ದರೂ
ಕನಸೊಂದು ಉಳಿದೀತು !
ಅದನುಂಡೆ ಬರಲಿರವ
ಮನಸು ಬೆಳೆದೀತು !

ದಟ್ಟ ಆಶಾವಾದದ ನಡುವೆ ಬೆಳೆಯುವ ಈ ಕವಿಯ ವಿಶಿಷ್ಟ ಸಾಧನೆ ಗಮನಿಸಬೇಕೆಂದರೆ ಇವರ ವಚನೋದ್ಯಾನಕ್ಕೇ ಹೋಗಬೇಕು. ಈವರೆಗೆ ಸಿದ್ಧಯ್ಯ ಪುರಾಣಿಕರು ವಚನೋದ್ಯಾನ ಮತ್ತು ವಚನ ನಂದನ ಎಂಬ ಎರಡು ವಚನ ಸಂಕಲನಗಳನ್ನು ಹೊರತಂದಿದ್ದಾರೆ. ವಚನ ನಂದನಕ್ಕೆ ಹುಬ್ಬಳ್ಳಿಯ ಮೂರು ಸಾವಿರ ಮಠದ ಪುರಸ್ಕಾರ ದೊರೆತಿದ್ದರೆ, ವಚನೋದ್ಯಾನ ಕಲಕತ್ತೆಯ ಭಾರತೀಯ ಭಾಷಾ ಪರಿಷತ್ತು ಆರಂಭಿಸಿದ ಭಿಲ್ವಾರಾ ಪ್ರಶಸ್ತಿಯನ್ನು ಪ್ರಪ್ರಥಮವಾಗಿ ಕನ್ನಡಕ್ಕೆ ತಂದುಕೊಟ್ಟ ಐತಿಹಾಸಿಕವಾದ ಕೃತಿಯಾಗಿದೆ. ವಚನೋದ್ಯಾನದಲ್ಲಿ ಆಧುನಿಕ ವಚನಕಾರರಲ್ಲಿ ಅತ್ಯಂತ ಪ್ರಮುಖರೆನಿಸುವ ವಚನಕಾರರನ್ನು ಎದುರುಗೊಳ್ಳುತ್ತೇವೆ. ಪುರಾಣಿಕರಿಗೆ ವಚನ ಪ್ರಕಾರ ಮಿಕ್ಕೆಲ್ಲ ಪ್ರಕಾರಗಳಿಗಿಂತ ಹೆಚ್ಚು ಸಮರ್ಥವೂ, ಉಚಿತವೂ ಆದ ಅಭಿವ್ಯಕ್ತಿಯಾಗಿರುವಂತಿದೆ. ಈ ಎರಡು ವಚನಗಳನ್ನು ಗಮನಿಸಿ :

೧) ಫಲವಿತ್ತ ರೆಂಬೆ ಬಾಗುತ್ತದೆ,
ಗೊನೆ ಹೊತ್ತ ಬಾಳೆ ಬಾಗುತ್ತದೆ,
ತೆನೆ ಹೊತ್ತ ದಂಟು ಬಾಗುತ್ತದೆ,
ಏನೇನೋ ಇಲ್ಲದುದು ಬೀಗುತ್ತದೆ ನೋಡಾ -
ಸ್ವತಂತ್ರಧೀರ ಸಿದ್ಧೇಶ್ವರಾ !

೨) ಹೂವು ತನ್ನೆದೆಯ ತೆರೆದರೆ ಅಂದ,
ಸುಗಂಧ, ಮಕರಂದಗಳ ಸುಗ್ಗಿ!
ಸಿಂಪುಗಳು ತಮ್ಮೆದೆಯ ತೆರೆದರೆ ಮುತ್ತುಗಳು ಬರುವುವು ನುಗ್ಗಿ.
ಹನುಮ ತನ್ನೆದೆಯ ತೆರೆದರೆ ಸೀತಾರಾಮರ ಚಿತ್ರ
ಇರುಳು ತನ್ನೆದೆಯ ತೆರೆದರೆ ಕೋಟಿ ಕೋಟಿ ನಕ್ಷತ್ರ-
ಎಲ್ಲರೆದೆಗಳಲ್ಲಿ ಒಂದಿಲ್ಲೊಂದು ನಿಧಿ, ನಿಧಾನ ನಿನ್ನ ವರ ಪ್ರದಾನ !
ನನ್ನೆದೆಯಲ್ಲಿ ನೀನಾದರೂ ಇರಯ್ಯ ಸ್ವತಂತ್ರ ಧೀರ ಸಿದ್ಧೇಶ್ವರಾ !

ಸಿದ್ಧಯ್ಯ ಪುರಾಣಿಕರ ಪ್ರತಿಭೆ ವಚನೋದ್ಯಾನದಲ್ಲಿ ತನ್ನ ಸಿದ್ಧಿ ಪಡೆದಿರುವುದನ್ನು ಕಾಣಬಹುದು. ತುಷಾರ ಹಾರ ಎಂಬುದು ಕಥಾ ಸಂಗ್ರಹವೆಂದಿದ್ದರೂ ಅದು ಹನಿಗತೆಗಳ ಸಂಕಲನ. ಅದರ ವೈಶಿಷ್ಟ್ಯ ಎಂದರೆ ಅಲ್ಲಿನ ಕೆಲವು ಹನಿಗತೆಗಳು ಹೊಸ ಪುರಾಣ ಸೃಷ್ಟಿಯನ್ನೆ ನಡೆಸಿಬಿಟ್ಟಿವೆ.

ಸಿದ್ಧಯ್ಯ ಪುರಾಣಿಕರ ಮತ್ತೊಂದು ಮಹತ್ವದ ಕೃತಿ ಶರಣ ಚರಿತಾಮೃತ. ಈ ಗ್ರಂಥವನ್ನವರು ವಯಸ್ಕರ ಶಿಕ್ಷಣ ಸಂಸ್ಥೆಗಾಗಿ ಬರೆದರೂ ಇದರ ರಚನೆಯ ಹಿನ್ನೆಲೆಯಲ್ಲಿ ಅಪಾರವಾದ ಅಧ್ಯಯನ ಹಾಗೂ ವಿದ್ವತ್ತುಗಳಿವೆ. ಆಕರಗ್ರಂಥವೆನ್ನಿಸಿಕೊಂಡಿರುವ ಈ ಕೃತಿ ಎಪ್ಪತ್ತೆಂಟು ಶಿವಶರಣರ ಸುಂದರ ಜೀವನ ಚಿತ್ರಗಳನ್ನೊಳಗೊಂಡಿದೆ. ಹೃದ್ಯವಾದ ಘಟನೆಗಳಿಂದ ಅತ್ಯಂತ ಸ್ವಾರಸ್ಯಕರವಾಗಿ ಶರಣ ಚರಿತೆಯನ್ನು ನಿರೂಪಿಸುವ ಈ ಗ್ರಂಥದ ನಿರೂಪಣಾ ಕ್ರಮಕ್ಕೆ ಮಾದರ ಚೆನ್ನಯ್ಯನನ್ನು ಕುರಿತ ಈ ಮಾತು ನಿದರ್ಶನವಾಗಿದೆ : ಕಂಚಿಯಲ್ಲಿ ಕೂಡ ಕನ್ನಡದ ಕಹಳೆ ಮೊಳಗುವಂತೆ ಮಾಡಿದ ಮಹಾತ್ಮನೀತ.

ಶ್ರೀ ಪುರಾಣಿಕ ಅವರ ಕಾರ್ಯಕ್ಷೇತ್ರ ವಿಸ್ತಾರವಾದದ್ದು. ಕನ್ನಡ ನಿಘಂಟು ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಕೇಂದ್ರ-ರಾಜ್ಯ ಸಾಹಿತ್ಯ ಅಕಾಡೆಮಿಗಳ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಬಸವ ಸಮಿತಿಯ ಉಪಾಧ್ಯಕ್ಷರು. ಬಸವಪಥ ಹಾಗೂ ಬಸವ ಜರ್ನಲ್‌ಗಳ ಪ್ರಧಾನ ಸಂಪಾದಕರು. ಕರ್ನಾಟಕ ಜಾನಪದ ಟ್ರಸ್ಟಿನ ಟ್ರಸ್ಟಿಗಳು, ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟಿನ ಅಧ್ಯಕ್ಷರು, ಬಿ.ಎಂ.ಶ್ರೀ. ಪ್ರತಿಷ್ಠಾನದ ಕಾರ್ಯಸಮಿತಿ, ಡಾ. ಸರೋಜಿನಿ ಮಹಿಷಿ ಸಮಿತಿ ಸದಸ್ಯರು. ಇಷ್ಟೇ ಅಲ್ಲದೆ ಗೋಕಾಕ ಚಳುವಳಿಯಲ್ಲಿ ಮುಂಚೂಣಿಯಲ್ಲಿದ್ದು ಕನ್ನಡದ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದವರು. ಲೋಕಸೇವಾ ಆಯೋಗದ ಎದುರು ಕನ್ನಡಕ್ಕಾಗಿ ಉಪವಾಸ ಸತ್ಯಾಗ್ರಹವೇ ಅಲ್ಲದೆ ಕನ್ನಡ

ಪರ ಹೋರಾಟಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ. ಸಾಹಿತ್ಯ ರಚನೆ, ಕನ್ನಡದ ಕೆಲಸ ನಿರಂತರವಾದ ಅಧ್ಯಯನ ಇವರ ಜೀವನದ ಉಸಿರಾಗಿವೆ.

ಸೇವಾವಧಿಯಲ್ಲಿ ಹಲವೊಮ್ಮೆ ಕಿರುಕುಳಕ್ಕೊಳಗಾಗಬೇಕಾಯಿತು. ಸೇವಾಜ್ಯೇಷ್ಠತೆಗೆ ಒಮ್ಮೆ ಭಂಗವುಂಟಾಯಿತು. ಇಷ್ಟಾದರೂ ಬದುಕಿನ ಬಗ್ಗೆ ಅವರು ಹೇಳುತ್ತಾರೆ: ಒಟ್ಟಿನಲ್ಲಿ ಸಂತೃಪ್ತ ನಾನು.

ಸಿದ್ಧಯ್ಯ ಪುರಾಣಿಕರು ಸಾಹಿತ್ಯ ಕ್ಷೇತ್ರದಲ್ಲಿ ಪಡೆದ ಮನ್ನಣೆಗಳು ಸಾಕಷ್ಟಿವೆ. ಹರಪನಹಳ್ಳಿಯ ಕನ್ನಡ ಸಾಹಿತ್ಯ ಸಮ್ಮೇಳನದ ಸಾಹಿತ್ಯ ಗೋಷ್ಠಿಯ ಅಧ್ಯಕ್ಷತೆ, ಮೈಸೂರಿನ ಸಾಹಿತ್ಯ ಸಮ್ಮೇಳನದ ಲೇಖಕರ ಗೋಷ್ಠಿಯ ಅಧ್ಯಕ್ಷತೆ, ಬೀದರ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿ ಅಧ್ಯಕ್ಷತೆ, ದೆಹಲಿ ಸಮ್ಮೇಳನದ ಕನ್ನಡ ಭವಿತವ್ಯ ಗೋಷ್ಠಿಯ ಅಧ್ಯಕ್ಷತೆ, ರಾಯಚೂರು, ಕೊಡಗುಗಳ ಜಿಲ್ಲಾ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷತೆ, ಹೊಂಬುಜ ಹಾಗೂ ಧರ್ಮಸ್ಥಳಗಳ ಸರ್ವಧರ್ಮ ಸಮ್ಮೇಳನಗಳ ಅಧ್ಯಕ್ಷತೆ, ಹೈದರಾಬಾದಿನಲ್ಲಿ ನಡೆದ ಪಂಚಭಾಷಾ ಕವಿ ಸಮ್ಮೇಳನದ ಅಧ್ಯಕ್ಷತೆ, ಮೈಸೂರಿನಲ್ಲಿ ನಡೆದ ದಸರಾ ಕವಿ ಸಮ್ಮೇಳನದ ಅಧ್ಯಕ್ಷತೆ, ನವಿಲುಗುಂದದಲ್ಲಿ ನಡೆದ ವಚನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ - ಹೀಗೆ ಅನೇಕ ಸಮ್ಮೇಳನಗಳಲ್ಲಿ ಅಧ್ಯಕ್ಷತೆ ವಹಿಸಿದ ಹಿರಿಮೆ ಇವರದು. ಅಷ್ಟೇ ಅಲ್ಲ ಗುಲಬರ್ಗದಲ್ಲಿ ನಡೆದ ೫೮ ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನೂ ಅಲಂಕರಿಸಿದವರಾಗಿದ್ದಾರೆ. ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿಯನ್ನೂ ಪಡೆದಿರುವ ಕವಿ, ವಿಮರ್ಶಕ, ವಾಗ್ಮಿ ಹಾಗೂ ವಿದ್ವಾಂಸರಾದ ಸಿದ್ಧಯ್ಯ ಪುರಾಣಿಕರನ್ನು ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿಯನ್ನಿತ್ತು ಸನ್ಮಾನಿಸಿದೆ.

ಸಿದ್ಧಯ್ಯ ಪುರಾಣಿಕರು ಉರ್ದು, ಇಂಗ್ಲೀಷ್‌ಗಳಲ್ಲೂ ನಿರರ್ಗಳವಾಗಿ ಮಾತಾಡಬಲ್ಲವರು. ಕನ್ನಡದಲ್ಲಂತೂ ಉದ್ದಾಮ ವಾಗ್ಮಿಯೆನಿಸಿದ್ದಾರೆ. ನನ್ನ ನಿನ್ನೆಗಳೊಡನೆ ಕಣ್ಣು ಮುಚ್ಚಾಲೆ ಎಂಬ ಅವರ ಆತ್ಮವೃತ್ತ ಅನೇಕ ಕಾರಣಗಳಿಗಾಗಿ ಪ್ರಮುಖವಾದ ಸಾಹಿತ್ಯಕ ದಾಖಲೆಯಾಗಿದೆ. ಕುವೆಂಪು ಇವರನ್ನು ಕುರಿತು ಹೇಳಿದ ಮಾತುಗಳನ್ನು ಗಮನಿಸಿ: ಜ್ಞಾನ, ಅಧಿಕಾರ, ವಿನಯ, ಸೌಜನ್ಯ, ಸೃಜನಶೀಲತೆಗಳು ಏಕತ್ರ ಸಮಾವೇಶಗೊಳ್ಳುವುದು ತುಂಬ ಅಪರೂಪ ಎಂಬುದು ನಮ್ಮೆಲ್ಲರ ಅನುಭವಕ್ಕೆ ಬಂದ ವಿಷಯವಾಗಿದೆ. ಇದಕ್ಕೆ ಅಪರೂಪವಾಗಿ ನಿಂತ ಪ್ರತಿಭಾಶೀಲ ಸತ್ಪುರುಷರ ವಿರಳ ಪಂಕ್ತಿಯಲ್ಲಿ ನಿಂತಿದ್ದಾರೆ ಶ್ರೀ ಪುರಾಣಿಕರು.

★★★

ಕೃಪೆ : ಸಾಲುದೀಪಗಳು - ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

## ಅಭಿನಂದನೆಗಳು

## ಶ್ರೀ ಮ. ಕೃ. ಮೇಗಾಡಿ ಅವರಿಗೆ ಕ್ರಿಯಾಶೀಲ ಶಿಕ್ಷಕ ಪ್ರಶಸ್ತಿ

ತೇರದಾಳದ ಮ. ಕೃ. ಮೇಗಾಡಿ ಅವರು ಸರಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದು, ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತಮ್ಮನ್ನು ನಿರಂತರವಾಗಿ ತೊಡಗಿಸಿಕೊಂಡು ಅನೇಕ ಸಂಘಟನೆಗಳನ್ನು ಕಟ್ಟಿ ಬೆಳೆಸುವುದರಲ್ಲಿ ಮುಂಚೂಣಿಯಲ್ಲಿದ್ದಾರೆ. ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾಗಿ ಸಾಹಿತ್ಯ ಪರಿಷತ್ತಿನ ಯಶಸ್ವಿಗೆ ಕಾರಣರಾಗಿದ್ದಾರೆ. ಸಂಯುಕ್ತ ಕರ್ನಾಟಕ ಪತ್ರಿಕೆಯ ಗೌರವ ವರದಿಗಾರರಾಗಿ ಈ ಭಾಗದ ಜನರ ನೋವು-ನಲಿವುಗಳಿಗೆ ಸ್ಪಂದಿಸುವ ಹೃದಯ ಶ್ರೀಮಂತಿಕೆ ಹೊಂದಿದ್ದಾರೆ.



ಸದ್ವಿಚಾರ ಪ್ರಕಾಶನ ಪ್ರಾರಂಭಿಸಿ ಅನೇಕ ಗ್ರಂಥಗಳನ್ನು ಪ್ರಕಟಪಡಿಸುವುದರ ಮೂಲಕ ಈ ಭಾಗದ ಯುವ ಬರಹಗಾರರಿಗೆ ವೇದಿಕೆ ಒದಗಿಸಿದ್ದಾರೆ.

ಶರಣ ಚೇತನ ಪತ್ರಿಕೆಯ ಸಹ ಸಂಪಾದಕರಾಗಿ ಪತ್ರಿಕೆಯ ಬೆಳವಣಿಗೆಗೆ ಹಲವು ನಿಟ್ಟಿನಿಂದ ಆರಂಭದಿಂದಲೂ ಶ್ರಮಿಸಿದ್ದಾರೆ. ಬಸವರಾಜ ಗವಿಮಠ ಸಾ|| ಹುನ್ನೂರ ಇವರು ತಮ್ಮ ತಂದೆ-ತಾಯಿಗಳ ಸ್ಮರಣಾರ್ಥ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಇತ್ತೀಚಿಗೆ ಕ್ರಿಯಾಶೀಲ ಶಿಕ್ಷಕ ಪ್ರಶಸ್ತಿಯನ್ನು ಮ. ಕೃ. ಮೇಗಾಡಿ ಅವರಿಗೆ ನೀಡಿ ಗೌರವಿಸಿದ್ದಾರೆ.

ಈ ಸಂದರ್ಭದಲ್ಲಿ ಶರಣ ಚೇತನ ಸಂಪಾದಕ ಮಂಡಳಿ, ಓದುಗರ ಬಳಗ ಅವರನ್ನು ಹಾರ್ದಿಕವಾಗಿ ಅಭಿನಂದಿಸುತ್ತದೆ.

# ಡಾ. ಸಿದ್ಧಯ್ಯ ಪುರಾಣಿಕರ ಸಾಹಿತ್ಯ ಸೇವೆ

✍ ಡಾ. ಸಿ. ನಾಗಭೂಷಣ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಾವ್ಯಾನಂದ ಕಾವ್ಯನಾಮದಿಂದ ಪ್ರಸಿದ್ಧರಾಗಿದ್ದ ಸಿದ್ಧಯ್ಯ ಪುರಾಣಿಕರು ದಕ್ಷ ಅಧಿಕಾರಿಗಳಾಗಿಯೂ ನಾಡಿನ ಜನತೆಯ ಸೇವೆ ಮಾಡುವುದರ ಮೂಲಕ ಖ್ಯಾತರಾಗಿದ್ದವರು. ಮೂಲತಃ ಕೊಪ್ಪಳ ಜಿಲ್ಲೆಯವರಾದ ಅವರು ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಕಾಲದ ಹೈದ್ರಾಬಾದ ಕರ್ನಾಟಕ ಪ್ರದೇಶದ ಸ್ಥಿತಿಗತಿಯನ್ನು ಕಣ್ಣಾರೆ ಕಂಡು ಅನುಭವಿಸಿದ್ದವರು. ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುವ ಜೊತೆ ಜೊತೆಯಲ್ಲಿಯೇ ಸಾಹಿತ್ಯ ಚಟುವಟಿಕೆಯನ್ನು ನಿರಂತರವಾಗಿ ಮುಂದುವರೆಸಿಕೊಂಡು ಬಂದವರು.

ಕಾವ್ಯಾನಂದರು ತಮ್ಮನ್ನು ತಾವು ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಳ್ಳುವ ಅವರ ಮನೆಯ ಪರಿಸರವು ಪ್ರೇರಣೆಯನ್ನು ನೀಡಿದ್ದಿತು. ಅವರ ಮನೆತನ ಸುಸಂಸ್ಕೃತ ಪುರಾಣಿಕ ಮನೆತನವಾಗಿದ್ದು ತಂದೆ, ಅಜ್ಜ ಎಲ್ಲರೂ ಸಾಹಿತ್ಯ ಸೇವೆಯಲ್ಲಿ ತೊಡಗಿಸಿಕೊಂಡವರಾಗಿದ್ದರು. ಪುರಾಣ ರಚನೆ, ಪುರಾಣ ವಾಚನ, ಕಾವ್ಯ, ನಾಟಕಗಳ ರಚನೆಯಲ್ಲಿ ಒಲವು ಇವರ ಮನೆತನಕ್ಕೆ ರಕ್ತಗತವಾಗಿದ್ದವು. ವಿದ್ಯಾಭ್ಯಾಸದ ಅವಧಿಯಲ್ಲಿ ಪಿ. ಬಿ. ದೇಸಾಯಿ, ಮಾನ್ವಿ ನರಸಿಂಗರಾಯ, ಡಿ. ಕೆ. ಭೀಮಸೇನ ರಾಯರಂತಹ ಅಧ್ಯಾಪಕರ ಮಾರ್ಗದರ್ಶನವೂ ಸಾಹಿತ್ಯಾಸಕ್ತಿ ಬೆಳೆಸುವಲ್ಲಿ ಕಾರಣವಾಯಿತು. ಜೊತೆಗೆ ಬಸವ, ಗಾಂಧಿ, ಹರ್ಡೇಕರ ಮಂಜಪ್ಪರಂತಹವರ ಆದರ್ಶ ಗುಣಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳುವುದರೊಂದಿಗೆ, ನಾಡು-ನುಡಿಗಳ ಬಗೆಗಿನ ಅಭಿಮಾನವು ಸಾಹಿತ್ಯ ಚಟುವಟಿಕೆಗಳಿಗೆ ಪ್ರೇರಣೆಯನ್ನು ನೀಡಿದವು.

ವಿದ್ಯಾರ್ಥಿಯಾಗಿದ್ದಾಗಲೇ ಕಾವ್ಯ ರಚನೆಯಲ್ಲಿ ತೊಡಗಿಕೊಂಡಿದ್ದ ಇವರು ಮುಂದೆ ತಮ್ಮ ಸಾಹಿತ್ಯಕ ಚಟುವಟಿಕೆಯನ್ನು ನಾಟಕ, ಕತೆ, ಪ್ರಬಂಧ, ಜೀವನ ಚರಿತ್ರೆ, ಕಾದಂಬರಿ ಮುಂತಾದ ಆಧುನಿಕ ಕಾವ್ಯದ ಎಲ್ಲಾ ಪ್ರಕಾರಗಳಿಗೂ ವಿಸ್ತರಿಸಿದರು. ಇವರ ಬಹುಮುಖ ಸಾಹಿತ್ಯ ಕೃಷಿಯನ್ನು ಕೆಳಕಂಡಂತೆ ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ.

**ಕಾವ್ಯ :** ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದಾಗಲೇ ಬೆಳಗು ಕವನ ರಚಿಸಿ ಅಧ್ಯಾಪಕರ ಪ್ರೀತಿಗೆ ಪಾತ್ರರಾಗಿದ್ದರು. ವಚನ ಸಾಹಿತ್ಯ, ಬೇಂದ್ರೆ, ಕುವೆಂಪುರವರ ಪ್ರಭಾವವನ್ನು ಇವರ ಕವನಗಳಲ್ಲಿ ಗುರುತಿಸಬಹುದಾಗಿದೆ. ಇವರು ಜಲಪಾತ (೧೯೫೩), ಕರುಣಾ ಶ್ರಾವಣ (೧೯೫೫), ಮಾನಸ ಸರೋವರ (೧೯೫೯), ಕಲ್ಲೋಲ ಮಾಲೆ (೧೯೬೮), ಮೊದಲು ಮಾನವನಾಗು (೧೯೭೯), ಚರಗ (೧೯೮೭), ಹಾಲ್ದೆನೆ (೧೯೯೦), ಮರುಳಸಿದ್ಧನ ಕಂತೆ (೧೯೯೧) ಗಳೆಂಬ ಒಟ್ಟು ಎಂಟು ಕವನ ಸಂಕಲನಗಳನ್ನು ಸೃಜಿಸಿದ್ದಾರೆ. ಇವರ ಕವನ ಸಂಕಲನಗಳಲ್ಲಿ ನವೋದಯ ಕವಿಗಳ ಕವನಗಳಲ್ಲಿ ಕಂಡು ಬರುವ ಹಾಗೆ ನಿಸರ್ಗದ ರುದ್ರರಮಣೀಯ ದೃಶ್ಯ, ಜೀವನ ಸೌಂದರ್ಯ, ಬದುಕಿನ ಮಧುರ ರಸಭಾವಗಳು ಸೊಗಸಾಗಿ ಒಡಮೂಡಿವೆ. ಜೊತೆಗೆ ದೇಶಭಕ್ತಿಗೀತೆಗಳು, ಸಾಮಾಜಿಕ ಲೋಪದೇಶಗಳನ್ನು ಎತ್ತಿ ಹೇಳುವ ಪದ್ಯಗಳು ಇವೆ. ಇವೆಲ್ಲಕ್ಕಿಂತ ಮುಖ್ಯವಾಗಿ ಪ್ರೀತಿ, ಸಮಾನತೆ, ಕರ್ತವ್ಯ ಪ್ರಜ್ಞೆ, ವಿಶ್ವಮಾನವ ಸಂದೇಶಗಳ ಅಭಿವ್ಯಕ್ತಿಯನ್ನು ಕಾಣಬಹುದಾಗಿದೆ.

ವಚನ ಸಾಹಿತ್ಯದ ಗಾಢ ಪ್ರಭಾವಕ್ಕೊಳಗಾಗಿದ್ದ ಕಾವ್ಯಾನಂದರು ಪ್ರಕೃತಿಯಲ್ಲಿ ಜಂಗಮತ್ವದ ಹುಡುಕಾಟವನ್ನು ಕಾಣಬಯಸುವ ಪರಿಯನ್ನು ಕೆಳಕಂಡ ಕವನದ ಸಾಲುಗಳು ಸ್ಥಿರೀಕರಿಸುತ್ತವೆ.

ಪ್ರಕೃತಿಯೇ ಗುರು ಗಗನ ಲಿಂಗವು  
ಜಗವೆ ಕೂಡಲ ಸಂಗಮ  
ಹುಡಿಯೆ ಭಸ್ಮವು ಹುಲ್ಲೆ ಪತ್ರಿಯು  
ಜಡವಿದೆಲ್ಲವು ಜಂಗಮ

ಕನ್ನಡ ನಾಡಿನ ಏಕೀಕರಣದ ಮೂಲಕ ಚದುರಿ ಹೋಗಿದ್ದ ಕನ್ನಡ ನಾಡು ಒಂದುಗೂಡಬೇಕೆಂಬ ಹಂಬಲ ಹೊತ್ತ ಕವಿಗಳಲ್ಲಿ ಇವರು ಒಬ್ಬರು. ಕವನಗಳ ಮೂಲಕ ಈ ಆಶಯಕ್ಕೆ ಸ್ಪಂದಿಸಿ ಜನತೆಯಲ್ಲಿ ನಾಡಿನ ಬಗೆಗೆ ಅಭಿಮಾನ, ಪ್ರೀತಿಯನ್ನು ಮೂಡಿಸಿದರು. ಕನ್ನಡದ ದೀಪವದು ಕಾಣಬಹುದು ಕವನದಲ್ಲಿ.

ಕನ್ನಡ ಬತ್ತಿಯೊಳಡಗಿದ ಮಂಕನು ತೆಗೆಯೆ  
ನನ್ನ ಕಾಯವು ಚಾಚು ಕಡ್ಡಿಯಾಗಿರಲಿ  
ಭಾರತದ ದೀವಳಿಗೆಯಲಿ ಶಿವಗನ್ನಡದ  
ಜ್ಯೋತಿಯದು ತೇಜಸ್ವಿನೊಡ್ಡಿಯಾಗಿರಲಿ

ಎಂದು ಅಖಂಡ ಕರ್ನಾಟಕ ರೂಪುಗೊಳ್ಳುವುದರ ಬಗೆಗೆ ಒಲವು ವ್ಯಕ್ತಪಡಿಸಿದ್ದಾರೆ. ೧೯೫೬ ರಲ್ಲಿ ಭಾಷಾವಾರು ಪ್ರಾಂತ ರಚನೆಯಿಂದ ಕನ್ನಡಿಗರ ಕನಸು ನನಸಾಗಿ ಸಾಕಾರಗೊಂಡ ಸಂದರ್ಭದಲ್ಲಿ

ಹೊತ್ತಿತೋ ಹೊತ್ತಿತು  
ಕನ್ನಡದ ದೀಪ  
ಮುಗಿಯಿತೊ ಮುಗಿಯಿತು  
ಶತಶತಮಾನಗಳ ಶಾಪ

ಎಂದು ಸಂತಸವನ್ನು ಹಂಚಿಕೊಂಡಿದ್ದಾರೆ. ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಸ್ವಾರ್ಥ ಹಾಗೂ ನೀತಿ ಬಾಹಿರತೆಗಳು ಹೆಚ್ಚಾಗಿ ಸಾಮಾಜಿಕ ಬದುಕಿನಲ್ಲಿ ಪ್ರೀತಿ - ವಿಶ್ವಾಸಗಳು ಮರೆಯಾಗಿ ದರ್ಪ ದೌರ್ಜನ್ಯಗಳು ವಿಜೃಂಭಿಸಿದ್ದನ್ನು ಕಂಡು ಮನನೊಂದ ಪುರಾಣಿಕರ ಕವಿಹೃದಯ,

ಸ್ವಾತಂತ್ರ್ಯವೇನೋ ಬಂತು  
ಸೌಜನ್ಯ ಮಾತ್ರ ಹೋಯ್ತು

ಬಿಡುಗಡೆಯೆ ಬಂತೋ ಇಲ್ಲೊ
ಹತ್ತುಗಡೆ ಹೊರಟು ಹೋಯ್ತು
ರಾಷ್ಟ್ರೀಯ ರಾಜ್ಯ ಬಂತು
ರಾಷ್ಟ್ರವೇ ಕಾಣದಾಯ್ತು
ಜಾತಿಯ ಜಗಳ ಹಬ್ಬಿ
ದೇಶವೇ ಮರೆತು ಹೋಯ್ತು ಎಂದು ಮರುಗಿದೆ.

ಆಧುನಿಕ ಕಾಲದ ಸಂಕೀರ್ಣ ಜೀವನದಲ್ಲಿ ವರ್ತಮಾನದ ಒತ್ತಡಕ್ಕೆ ಸಿಲುಕಿ ಮಾನವ ಮೃಗೀಯನಾಗುತ್ತಿರುವ ಸಂದರ್ಭದಲ್ಲಿ ಇದನ್ನು ತಪ್ಪಿಸಲು ಮಾನವೀಯ ಗುಣವೊಂದೆ ಏಕೈಕ ದಾರಿ ಎಂಬುದನ್ನು,

ಓದಿ ಬ್ರಾಹ್ಮಣನಾಗು
ಕಾದಿ ಕ್ಷತ್ರಿಯನಾಗು
ಶೂದ್ರ ವೈಶ್ಯನೆ ಆಗು
ದುಡಿದು ಗಳಿಸು
ಏನಾದರೂ ಆಗು
ನಿನ್ನೊಲವಿನಂತಾಗು
ಏನಾದರೂ ಸರಿಯೆ
ಮೊದಲು ಮಾನವನಾಗು

ಎಂದು ನುಡಿದಿದ್ದಾರೆ. ಈ ನುಡಿ ಮುತ್ತುಗಳು ಎಂದೆಂದಿಗೂ ಸಾರ್ವಕಾಲಿಕ ಸತ್ಯವಾಗಿವೆ. ಏಕೆಂದರೆ ಮಾನವಧರ್ಮ ಹಾಗೂ ಜೀವನ ಪ್ರೇಮಗಳೀ ಜನತೆಯಲ್ಲಿ ಭ್ರಾತೃತ್ವ - ಭಾವೈಕ್ಯತೆಯನ್ನು ಮೂಡಿಸುವಂತಹವುಗಳು. ಇವರ ಕವನಗಳ ಕುರಿತು ದೇಜಗೌ ಅವರ ವ್ಯಕ್ತಪಡಿಸಿರುವ ಕಾವ್ಯಾನಂದರು ತನ್ಮಯತೆಯಿಂದ ಪ್ರಕೃತಿ ಸೌಂದರ್ಯವನ್ನನುಭವಿಸಿ ಆ ಅನುಭವ ಪಾಕವನ್ನು ಶಾಬ್ದಿಕ ಪ್ರಣಾಳಿಕೆಯಲ್ಲಿ ಹರಿಸುವಂತೆಯೇ ಸಮಾಜದಲ್ಲಿ ತಾಂಡವವಾಡುತ್ತಿರುವ ಕರಾಳ ನಗ್ನತೆಯ ರೂಕ್ಷ ರೂಪದ ಪ್ರೇತ ಸ್ವರೂಪದ ವಿನಾಶಾತ್ಮಕವಾದ ಪಿಡುಗುಗಳನ್ನು ವಿವೇಕಾಕ್ಷಿಯ ಸಹಾನುಭೂತಿಯ ದೃಷ್ಟಿಯಿಂದ ನೋಡಿದ್ದಾರೆ. ಸೌಂದರ್ಯ ವರ್ಣನೆಯಲ್ಲಿ ಕುಸುಮ ಕೋಮಲವಾಗಿ ಕಂಡ ಅವರ ಮನಸ್ಸು ಸಾಮಾಜಿಕ ಲೋಪದೋಶಗಳ ಪ್ರಕಟಣೆಯಲ್ಲಿ ವಜ್ರಕಠೋರವಾಗುತ್ತದೆ ಎನ್ನುವ ಮಾತುಗಳು ಸ್ವೀಕಾರಾರ್ಹವಾಗಿವೆ. ಇವರ ಕವನಗಳಲ್ಲಿಯ ಪ್ರೇಮ ಭಾವನೆಯನ್ನು ಸೂಸುವ ಕವನಗಳು ಕವಿಯ ಅಂತರಂಗದಿಂದ ಹೊರಹೊಮ್ಮಿದ್ದು ಗಂಡು ಹೆಣ್ಣಿನ ಪ್ರೀತಿ - ಜೀವನದ ಅವಿಸ್ಮರಣೀಯ ಭಾಗವಾಗಿದೆ.

**ವಚನಗಳು :** ಬಸವಾದಿ ಪ್ರಮಥರ ವಚನ ಸಾಹಿತ್ಯಕ್ಕೆ ಮಾರುಹೋದ ಆಧುನಿಕ ಕವಿಗಳಲ್ಲಿ ಹಲವರು ವಚನವನ್ನು ಒಂದು ಸಾಹಿತ್ಯ ಪ್ರಕಾರವಾಗಿ ಮುಂದುವರೆಸಿಕೊಂಡು ಬಂದಿದ್ದಾರೆ. ಆಧುನಿಕ ಕಾಲದ ಅಭಿವ್ಯಕ್ತಿಗೆ ತಕ್ಕಂತೆ ವಚನ ಪ್ರಕಾರ ಮಾರ್ಪಾಡುಗೊಂಡಿದೆ. ಧಾರ್ಮಿಕ ಆಶಯದ ಸ್ಥಾನದಲ್ಲಿ ವೈಚಾರಿಕತೆ, ವಿಡಂಬನೆ ಬಂದು ಕೂತಿದೆ. ಆಧುನಿಕ ಕಾಲದಲ್ಲಿ ವಚನಗಳ ರಚನೆಯಲ್ಲಿ ತೊಡಗಿಕೊಂಡವರಲ್ಲಿ ಸಿದ್ಧಯ್ಯ ಪುರಾಣಿಕರು ಒಬ್ಬರು. ಇವರು ವಚನೋದ್ಯಾನ, ವಚನನಂದನ, ವಚನರಾಮ ಎಂಬ ಮೂರು ವಚನ ಸಂಕಲನಗಳಲ್ಲಿ ಸುಮಾರು ೧೫೦೦ ವಚನಗಳನ್ನು ರಚಿಸಿದ್ದಾರೆ. ಇವರ ವಚನಗಳ ಅಂಕಿತ 'ಸ್ವತಂತ್ರ ಧೀರ ಸಿದ್ದೇಶ್ವರಾ' ಆಗಿದೆ. ಇವರ ವಚನಗಳು ಪರಂಪರೆಯ ವಚನಗಳ ಹಾದಿಯಲ್ಲಿಯೇ ಮುನ್ನಡೆದುದರ ಜೊತೆಗೆ ಕಾಲಕ್ಕನುಗುಣವಾಗಿ ಹೊಸದರಲ್ಲಿಯ ಉತ್ತಮಾಂಶಗಳನ್ನು ಮೇಳೈಸಿಕೊಂಡಿವೆ. ಆತ್ಮಶೋಧನೆ, ಆತ್ಮವಿಮರ್ಶೆ, ಉನ್ನತಿಯ ಬಯಕೆ, ವಿನಯ, ಸಾಮಾಜಿಕ ವಿಡಂಬನೆ, ಸಮಕಾಲೀನ ಪ್ರಜ್ಞೆ ಇತ್ಯಾದಿ ಅಂಶಗಳನ್ನು ಇವರ ವಚನಗಳಲ್ಲಿ ಗುರುತಿಸಬಹುದಾಗಿದೆ.

ಇವರ 'ವಚನ ನಂದನ' ಸಂಕಲನದಲ್ಲಿಯ 'ಮನುಷ್ಯ ಮಾಲಿನ್ಯ'ವನ್ನು ಕುರಿತ ವಚನ ಸಮಕಾಲೀನ ಸಂದರ್ಭದಲ್ಲಿ ಅರ್ಥಗರ್ಭಿತವಾಗಿದೆ.

ನಡೆವ ಭೂಮಿ ಕೆಟ್ಟಿದೆ
ಕುಡಿವ ನೀರು ಕೆಟ್ಟಿದೆ
ಉಸಿರಾಡುವ ಗಾಳಿ ಕೆಟ್ಟಿದೆ
ಮನುಷ್ಯನೇ ಕೆಟ್ಟಮೇಲೆ
ಇವು ಕೆಟ್ಟುದಾವಚೋದ್ಯವಯ್ಯ
ಸ್ವತಂತ್ರಧೀರ ಸಿದ್ದೇಶ್ವರಾ

ಬಹುಪಾಲು ಇವರ ವಚನಗಳಲ್ಲಿ ಪ್ರಚಲಿತ ಮೌಲ್ಯಗಳ ಪತನದ ವಿಡಂಬನೆಯನ್ನು ಗುರುತಿಸಬಹುದಾಗಿದೆ.

**ನಾಟಕಗಳು :** ನಾಟಕ ಸಾಹಿತ್ಯ ಪ್ರಕಾರದಲ್ಲಿಯೂ ಕೈಹಾಕಿದ್ದಾರೆ. ಇವರು ಸ್ತ್ರೀ, ಬೆಳವಡಿ ಮಲ್ಲಮ್ಮ, ಸುಮರತಿ, ಆತ್ಮಾರ್ಪಣ, ಭಾರತ ವೀರ, ರಜತ ರೇಖೆ, ಭಗ್ನ ನೂಪುರ ಎಂಬ ಆರು ನಾಟಕಗಳನ್ನು ರಚಿಸಿದ್ದಾರೆ. ಇವರ ಕೆಲವು ನಾಟಕಗಳ ರಚನೆಗೆ ತನ್ನದೇ ಆದ ಹಿನ್ನೆಲೆ ಇದೆ. ಬಸವಣ್ಣನವರ ವಚನಗಳನ್ನಾಧರಿಸಿದ ಜೀವನ ಚರಿತ್ರೆಯನ್ನೊಳಗೊಂಡ ವಸ್ತು ಆತ್ಮಾರ್ಪಣ ನಾಟಕದ್ದಾಗಿದ್ದರೆ, ೧೯೬೩ ರಲ್ಲಿ ನಡೆದ ಭಾರತ - ಚೀನಾ ದೇಶಗಳ ನಡುವಿನ ಯುದ್ಧದಿಂದ ಪ್ರೇರಣೆಗೊಂಡು ರಚಿತಗೊಂಡಿದ್ದು ಭಾರತವೀರ ನಾಟಕ ಬೇರೆ ಬೇರೆ ಕಾಲ, ಭೌಗೋಳಿಕತೆಗಳಿಗೆ ಸೇರಿದ ಮೂವರು ಪ್ರಸಿದ್ಧ ಮಹಿಳೆಯರಾದ ತಮಿಳುನಾಡಿನ ಕನ್ನಗಿ, ಕನ್ನಡ ನಾಡಿನ ಅಕ್ಕಮಹಾದೇವಿ, ಕಾಶ್ಮೀರದ ಹಬ್ಬಾ ಖಾತೂನ್‌ರ ಯಶೋಗಾಥೆಯೇ ಭಗ್ನ ನೂಪುರ ನಾಟಕದ ಕಥಾವಸ್ತು. ಇವರ ನಾಟಕಗಳು ಸರಳ ಸಹಜ ರೀತಿಯಲ್ಲಿದ್ದು ಸಾರ್ವಕಾಲಿಕ ಮೌಲ್ಯಗಳನ್ನು ಒಳಗೊಂಡಿವೆ. ಕಾವ್ಯಾನಂದರು ಕವಿಯಾಗಿ ನಾಟಕದ ರಚನೆಗೆ ತೊಡಗಿದಾಗ ಅವರ ಕವಿ ಪ್ರತಿಭೆ ಉಕ್ಕಂದವಾಗಿ ಹರಿಯುತ್ತದೆ ಎಂಬುದಕ್ಕೆ ಈ ನಾಟಕಗಳು ನಿದರ್ಶನವಾಗಿವೆ.

**ಕಾದಂಬರಿ :** ಕಲ್ಯಾಣ ಚಾಲುಕ್ಯ ದೊರೆ ಆರನೆಯ ವಿಕ್ರಮಾದಿತ್ಯನ ಬಗೆಗೆ ತ್ರಿಭುವನಮಲ್ಲ ಎಂಬ ಹೆಸರಿನಲ್ಲಿ ೧೭ ಅಧ್ಯಾಯಗಳಲ್ಲಿ ವಿಸ್ತಾರವಾಗಿ ಐತಿಹಾಸಿಕ ಕಾದಂಬರಿಯನ್ನು ರಚಿಸಿದ್ದಾರೆ. ಗದ್ಯ - ಪದ್ಯ ಮಿಶ್ರಿತ ಪ್ರೌಢಶೈಲಿಯಲ್ಲಿ ನಿರೂಪಿತವಾಗಿದೆ. ಚಕ್ರವರ್ತಿಯ ವ್ಯಕ್ತಿತ್ವಕ್ಕೆ ಹೊಂದುವ ಕವಿತನದ ನುಡಿಗಳು ಕಾದಂಬರಿಯುದ್ದಕ್ಕೂ ಕಾಣಿಸಿಕೊಂಡಿವೆ. ಒಬ್ಬ ಸಮರ್ಥ ಚಕ್ರವರ್ತಿ ಮಾತ್ರ ಸಮಸ್ತ ದೇಶವನ್ನು ಸುಖಿಯಾಗಿ ಆಳಬಲ್ಲ ಹಾಗೂ ತನ್ನ ಸುಖಕ್ಕಿಂತ ಜನಗಳ ಹಿತವೆ ಮುಖ್ಯವೆಂದು ಭಾವಿಸಿದವನು ಯುಗಪುರುಷನಾಗುತ್ತಾನೆ ಎಂಬುದಕ್ಕೆ ತ್ರಿಭುವನ ಮಲ್ಲ ಕಾದಂಬರಿ ನಿದರ್ಶನವಾಗಿದೆ.

**ಶಿಶುಸಾಹಿತ್ಯ :** ಕಾವ್ಯಾನಂದರು ಶಿಶು ಸಾಹಿತ್ಯದಲ್ಲಿ ಕೃಷಿ ಮಾಡಲು ಕಾರಣೀಭೂತರಾದವರು ಡಿ. ಕೆ. ಭೀಮಸೇನರಾಯರು. ಮಕ್ಕಳಿಗಾಗಿಯೇ ಗಿಲ್‌ಗಿಲ್ ಗಿಲಗಚ್ಚಿ, ತುಪ್ಪ-ರೊಟ್ಟಿ, ಗೇಗೇಗೆ, ತಿರುಗಲೆ ತಿರುಗಲೆ ತಿರಗುಯ್ಯಾಲೆ ಎಂಬ ಕವನ ಸಂಕಲನಗಳನ್ನು ನ್ಯಾಯ-ನಿರ್ಣಯ, ಸಿದ್ಧರಾಮ, ಮಿರ್ಜಾ ಗಾಲಿಬ್ ಎಂಬ ಚರಿತ್ರೆ ನಾಯಕರ ಬದುಕನ್ನು ಬಿಂಬಿಸುವ. ನಾಟಕಗಳನ್ನು ರಚಿಸಿದ್ದಾರೆ. ಮಗುವಿನ ಭಾಷೆ, ಅಭಿರುಚಿಯನ್ನು ತಿಳಿದುಕೊಂಡು ಅವರ ಮಟ್ಟಕ್ಕೆ ಇಳಿದು, ಪ್ರಾಸ - ಸಂಕೇತಗಳನ್ನು ಬಳಸಿ ಸರಳ ರೀತಿಯಲ್ಲಿ ಕವನ ರಚಿಸಿದ್ದಾರೆ. ನಾಡು - ನುಡಿಯ ಬಗೆಗೆ ಮಕ್ಕಳಲ್ಲಿ ಗೌರವ ಮೂಡುವ ಕವನಗಳನ್ನು ರಚಿಸಿದ್ದಾರೆ.

ಅಜ್ಜನ ಕೋಲಿದು ನನ್ನಯ ಕುದುರೆ
ಹೆಜ್ಜೆಗೆ ಹೆಜ್ಜೆಗೆ ಕುಣಿಯುವ ಕುದುರೆ
ಕಾಲಿಲ್ಲದೆಯೆ ಓಡುವ ಕುದುರೆ
ಕೂಳಿಲ್ಲದೆಯೆ ಬದುಕುವ ಕುದುರೆ ಯು ಪ್ರಸಿದ್ಧವಾದ ಶಿಶುಗೀತೆಯಾಗಿದೆ.

**ಸಣ್ಣಕಥೆ :** ಕಾವ್ಯಾನಂದರು ಕನ್ನಡ ಭಾಷೆಯ ಜೊತೆಗೆ ಉರ್ದು, ಹಿಂದಿ, ಇಂಗ್ಲೀಷ, ಮರಾಠಿ, ತೆಲುಗು ಭಾಷೆಗಳಲ್ಲಿ ಪ್ರಭುತ್ವ ಹೊಂದಿದ್ದರು. ಈ ಹಿನ್ನೆಲೆಯಲ್ಲಿ ವಿವಿಧ ಭಾಷೆಗಳಲ್ಲಿರುವ ಉತ್ತಮ ಕಥೆಗಳನ್ನು ಆಯ್ದು 'ಕಥಾಮಂಜರಿ' ಹೆಸರಿನಲ್ಲಿ ಅನುವಾದಿಸಿ ಪ್ರಕಟಿಸಿದ್ದಾರೆ. ಅನ್ಯಭಾಷೆಯ ಕಥೆಯ ಸ್ವಾರಸ್ಯಕ್ಕೆ ಭಂಗಬರದಂತೆ ಕನ್ನಡಕ್ಕೆ ತಂದಿದ್ದಾರೆ. 'ತುಷಾರ ಹಾರ' ಕಥಾ ಸಂಕಲನದಲ್ಲಿ ನಲವತ್ತೊಂದು ಕಥೆಗಳಿದ್ದು ಬದುಕಿನ ವಿವಿಧ ಅನುಭವಗಳನ್ನು ವ್ಯಂಗ್ಯ, ಹಾಸ್ಯ, ನೀತಿಯ ಮೂಲಕ ಪರಿಚಯಿಸುತ್ತವೆ. ಈ ಸಂಕಲನದಲ್ಲಿ ಪೌರಾಣಿಕ, ಸಾಮಾಜಿಕ, ಧಾರ್ಮಿಕ ಹಾಗೂ ಪ್ರಕೃತಿಗೆ ಸಂಬಂಧಿಸಿದ ಕತೆಗಳಿವೆ.

**ಜೀವನ ಚರಿತ್ರೆ :** ಇವರ ಶರಣ ಚರಿತಾಮೃತ ಕೃತಿಯು ಪುರಾಣಿಕರ ಶ್ರೇಷ್ಠ ಕೃತಿಗಳಲ್ಲಿ ಒಂದಾಗಿದೆ. ಬಸವ ಪೂರ್ವಯುಗದಿಂದ ಹಿಡಿದು ಬಸವೋತ್ತರ ಯುಗದವರೆಗಿನ ಅವಧಿಯಲ್ಲಿ ಬಾಳಿ ಬದುಕಿದ ಶಿವಶರಣರ ಚರಿತ್ರೆಯನ್ನು, ಅವರ ಜೀವನ ಸಂದೇಶವನ್ನು, ಮೌಲ್ಯಾಧಾರಿತ ಬದುಕನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಕಟ್ಟಿಕೊಟ್ಟಿದ್ದಾರೆ. ಈ ಕೃತಿಯು ಆಳವಾದ ಅಧ್ಯಯನವನ್ನು ಒಳಗೊಂಡಿದ್ದು ಅವರ ವಿದ್ವತ್ತಿನ ಹಿರಿಮೆಗೆ ಸಂಕೇತವಾಗಿದೆ. ಬಸವಣ್ಣನವರ ಜೀವನ ಹಾಗೂ ಸಂದೇಶ ಕೃತಿಯಲ್ಲಿ ಬಸವಣ್ಣನ ಜೀವಿತ ಸಂಗತಿಯ ಬಗೆಗೆ, ಕಲ್ಯಾಣಕ್ರಾಂತಿಯ ಸಮಗ್ರ ವಿವರಗಳ ಬಗೆಗೆ ಮಾಹಿತಿ ಒದಗಿಸಿಕೊಟ್ಟಿದ್ದಾರೆ. ಅದೇ ರೀತಿ ಅಲ್ಲಮಪ್ರಭು, ಮಹಾದೇವಿಯಕ್ಕ, ಹರ್ಡೇಕರ ಮಂಜಪ್ಪ, ನಜೀರ ಅಕಬರ ಆದಿ ಮೊದಲಾದವರ ಜೀವನ ಚರಿತ್ರೆಗಳನ್ನು ರಚಿಸಿದ್ದಾರೆ.

**ಗ್ರಂಥ ಸಂಪಾದನೆ ಹಾಗೂ ಇತರೆ ಸಂಕೀರ್ಣ ಕೃತಿಗಳು :**

ಮಳೆಯರಾಜ ಚಾರಿತ್ರ ಎನ್ನುವ ನಡುಗನ್ನಡ ಕೃತಿಯನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಹಾಗೆಯೇ ಸುಬೋಧಸಾರ, ಶ್ರೀಕಾರ, ಕನ್ನಡ ಪದ್ಯ ರತ್ನಾಕರ ಕೃತಿಗಳನ್ನು ಸಂಪಾದಿಸಿದ್ದಾರೆ. ಅಲ್ಲದೆ ವಿವಿಧ ಸಂದರ್ಭದಲ್ಲಿ ಕನಕದಾಸ ಪ್ರಶಸ್ತಿ, ಸಿದ್ಧಗಂಗಾಶ್ರೀ, ಶರಣ ಪ್ರಸಾದ, ಬಸವದರ್ಶನ, ಬಸವ ಮತ್ತು ದಲಿತೋದಯ, ಮಣಿಹ (ಫ. ಗು. ಹಳಕಟ್ಟಿಯವರ ಅಭಿನಂದನಾ ಗ್ರಂಥ), ಬಸವ ಮತ್ತು ವಿಚಾರವಾದ ಎಂಬ ಗ್ರಂಥಗಳ ಸಂಪಾದನೆಯ ಹೊಣೆ ಹೊತ್ತಿದ್ದಾರೆ. ಈ ಸಂಪಾದಿತ ಕೃತಿಗಳಲ್ಲಿ ಕೆಲವು ಅಭಿನಂದನಾ ಗ್ರಂಥಗಳಾಗಿದ್ದರೆ, ಕೆಲವು ವಿಚಾರ ಸಂಕಿರಣಗಳಲ್ಲಿ ಮಂಡಿತವಾದ ಪ್ರಬಂಧಗಳ ಸಂಕಲನಗಳಾಗಿವೆ. ಇದರ ಜೊತೆಗೆ ಆಕಾಶವಾಣಿಗೆ ಬರೆದ ಚಿಂತನೆಗಳ ಸಂಗ್ರಹಗಳನ್ನೊಳಗೊಂಡ 'ಚಿಂತನ ಲಹರಿ' ಕೂಡ ಪ್ರಕಟವಾಗಿದೆ. ಇದರಲ್ಲಿ ೪೬ ಚಿಂತನೆಗಳಿವೆ. ಜನಸಾಮಾನ್ಯರಿಗೆ ತಿಳಿವಳಿಕೆ ಮೂಡಿಸುವ 'ವಿಕಾಸವಾಣಿ' ಹಾಗೂ ಗ್ರಾಮದ ಅಭಿವೃದ್ಧಿಯ ಕುರಿತ 'ಗ್ರಾಮ ಸ್ವರಾಜ್ಯ' ಕೃತಿಗಳನ್ನು ರಚಿಸಿದ್ದಾರೆ. ಎಂಟನೆ ತರಗತಿಯ ಪಠ್ಯಪುಸ್ತಕಕ್ಕಾಗಿ ತಿಂಗಳಿನಿಂದ ಮಂಗಳನತ್ತ ಎಂಬ ಕೃತಿಯನ್ನು ರಚಿಸಿದ್ದಾರೆ.

**ಆತ್ಮಚರಿತ್ರೆ :** ಪ್ರಾಮಾಣಿಕ ನಿರೂಪಣೆ, ಆಪ್ತ ಬರವಣಿಗೆಯ ಆಶಯವಾದ ಆತ್ಮ ಚರಿತ್ರೆಯನ್ನು ರಚಿಸಿದವರಲ್ಲಿ ಇವರೂ ಒಬ್ಬರು. ಅವರು 'ನನ್ನ ನಿನ್ನೆಗಳೊಡನೆ ಕಣ್ಣು ಮುಚ್ಚಾಲೆ' ಎಂಬ ಆತ್ಮ ಚರಿತ್ರೆಯನ್ನು ರಚಿಸಿದ್ದು ಅದರಲ್ಲಿ ಹೈದರಾಬಾದ - ಕರ್ನಾಟಕ ಪ್ರದೇಶದ ಜನಜೀವನ, ಆಡಳಿತ, ಸ್ವಾತಂತ್ರ್ಯ ಹೋರಾಟ ರಜಕಾರರ ಹಾವಳಿ, ಶಿಕ್ಷಣ ಪದ್ಧತಿ, ಕಲೆ, ಸಾಹಿತ್ಯ - ಸಂಸ್ಕೃತಿಗಳ ವಿವರಗಳನ್ನು ಅಮೂಲಾಗ್ರವಾಗಿ ಕಟ್ಟಿಕೊಟ್ಟಿದ್ದಾರೆ. ಈ ಕೃತಿಯು ಕಾವ್ಯಾನಂದರ ಆತ್ಮಚರಿತ್ರೆಯ ಜೊತೆಗೆ ಹೈದರಾಬಾದ ಕರ್ನಾಟಕದ ಸಾಂಸ್ಕೃತಿಕ - ಚಾರಿತ್ರಿಕ ದಾಖಲೆಯೂ ಆಗಿದೆ.

ಕಾವ್ಯಾನಂದರು ತಮ್ಮ ಸಾಹಿತ್ಯ ಕೃಷಿಗೆ ನಾಡಿನ ಪ್ರತಿಷ್ಠಿತ ಪ್ರಶಸಿಗಳನ್ನು ಪಡೆದಿದ್ದಾರೆ. ಬಿಲ್ವಾರ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ವರ್ಷದ ಶ್ರೇಷ್ಠ ಪುಸ್ತಕ ಪುರಸ್ಕಾರ, ಸ. ಸ. ಮಾಳವಾಡ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ (೧೯೭೩) ಪದವಿಗಳು ಇವರ ಸಾಹಿತ್ಯ ಸೇವೆಗೆ ಸಂದಿರುವ ಪ್ರಶಸ್ತಿಗಳಾಗಿವೆ. ಅಲ್ಲದೆ ೧೯೮೭ ರಲ್ಲಿ ಕಲಬುರ್ಗಿಯಲ್ಲಿ ನಡೆದ ಅಖಿಲಭಾರತ ೫೮ ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಕನ್ನಡ ಜನತೆಯ ಗೌರವಕ್ಕೆ ಪಾತ್ರರಾಗಿದ್ದಾರೆ.

ಒಟ್ಟಾರೆ ಸಿದ್ಧಯ್ಯ. ಪುರಾಣಿಕರು ಸಾಹಿತ್ಯ ಕೃಷಿಯನ್ನು ವ್ಯಕ್ತಿಯಾಗಿಸಿ ಕೊಂಡವರಲ್ಲದಿದ್ದರೂ ಆಳವಾದ ಅಧ್ಯಯನ, ಸಾಮಾಜಿಕ ಕಳಕಳಿ, ಅಂತರಂಗದ ತುಡಿತಗಳಿಂದ ಸಾಹಿತ್ಯವನ್ನು ಸೃಷ್ಟಿಸುವುದರ ಮೂಲಕ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತಮ್ಮದೇ ಆದ ಸ್ಥಾನವನ್ನು ಪಡೆದುಕೊಂಡು ಕನ್ನಡಕ್ಕೊಬ್ಬರೇ ಕಾವ್ಯಾನಂದರಾಗಿದ್ದಾರೆ. ★★★